10 ಅಕ್ಟೋಬರ್ 2025 ಶುಕ್ರವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 210 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಗುರುವಾರ ನಡೆದ ಮಹಿಳಾ ವಿಶ್ವಕಪ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡಕ್ಕೆ 252 ರನ್ ಗುರಿ ನೀಡಿದ ಭಾರತ



ಭಾಷಾ ಗಡಿಯನ್ನು ಮೀರಿಸಿ ಕ್ರೇಜ್ ಹುಟ್ಟು ಹಾಕುತ್ತಿರುವ ಕನ್ನಡ ಸಿನಿಮಾನಗಳು » 2



ಹೃದಯಾಘಾತದಿಂದ ಭಾರತದಲ್ಲಿ 2.3 ಲಕ್ಷ ಮಂದಿ ಸಾವು » 3



ಜಾತ್ರೆ ಮೊದಲ ದಿನವೇ ಸ್ಥಳೀಯರ-ಪೊಲೀಸರ ಜಟಾಪಟಿ » 4

# ಹಾಸನಾಂಬ ಜಾತ್ರೋತ್ಸವಕ್ಕೆ ವಿದ್ಯುಕ್ತ ಚಾಲನೆ

## ವಿವಿಧ ಮಠಾಧೀಶರು, ಜನಪ್ರತಿನಿಧಿಗಳ ಉಪಸ್ಥಿತಿ | ಭಕ್ತರ ಜಯಘೋಷ



• ಪ್ರಜೋದಯ ವರದಿ

**ಹಾಸನ :** ವರ್ಷಕ್ಕೊಮ್ಮೆ ದರ್ಶನ ನೀಡುವ ಜಿಲ್ಲೆಯ ಅಧಿದೇವತೆ ಹಾಸನಾಂಬ ವಿಶ್ವರೂಪ ದರ್ಶನ ನೀಡಿದ್ದು, ಶುಕ್ರವಾರ ಮುಂಜಾನೆ ಯಿಂದ ಮುಂದಿನ 13 ದಿನಗಳ ಕಾಲ ಭಕ್ತರಿಗೆ ದರ್ಶನ ಭಾಗ್ಯ ಸಿಗಲಿದೆ.

ದೇವಾಲಯದ ಪ್ರಾಂಗಣದಲ್ಲಿ ಚಂಡೆ ವಾದ್ಯ, ಕಹಳೆ, ನಾದಸ್ವರ ಮೇಳೈಸಿದಾಗ ತಳವಾರು ವಂಶಸ್ಥ ನಂಜರಾಜೆ ಅರಸು ಅವರು ಬಾಳೆಕಂದು ಕತ್ತರಿಸುತ್ತಿದ್ದಂತೆ ಸ್ವಾಮೀಜಿಗಳು, ಅರ್ಚಕರು, ಜಿಲ್ಲಾಡಳಿತದ ಸಮ್ಮುಖದಲ್ಲಿ ಮಧ್ಯಾಹ್ನ 12.21ಕ್ಕೆ ದೇವಾಲಯದ ಗರ್ಭ ಗುಡಿಯ ಬಾಗಿಲು ತೆರೆಯಲಾಯಿತು. ಈ ವೇಳೆ ನೆರೆದಿದ್ದ ಭಕ್ತರು ಜಯಘೋಷ ಮೊಳಗಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಶಾಸಕರಾದ ಹೆಚ್.ಪಿ. ಸ್ವರೂಪ್, ಸಿ.ಎನ್.ಬಾಲಕೃಷ್ಣ, ಸಿಮೆಂಟ್ ಮಂಜು, ಮೇಯರ್ ಗಿರೀಶ್ ಚನ್ನವೀರಪ್ಪ ಸೇರಿ ಜಿಲ್ಲಾಡಳಿತದ ಅಧಿಕಾರಿಗಳು ಹಾಜರಿದ್ದರು.

### ಸ್ವಾಮೀಜಿಗಳ ಉಪಸ್ಥಿತಿ

ತುಮಕೂರಿನ ಸಿದ್ದಗಂಗಾ ಮಠದ ಶಿವಸಿದ್ದೇಶ್ವರ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ವಿರಾಜಪೇಟೆ ಅರೇಮೇರಿ ಕಳಂಚೇರಿ ಮಠ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕಿರಿಕೋಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ತೇಜೂರು ಮಠ ಶ್ರೀ ಕಲ್ಯಾಣ ಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ, ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ದೇವಸ್ಥಾನದ ಆಡಳಿತ ಅಧಿಕಾರಿ ಮಾರುತಿ, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಮುಂತಾದವರು ಹಾಜರಿದ್ದರು.

ಮೊದಲ ದಿನ ಸಾರ್ವಜನಿಕ ದರ್ಶನವಿಲ್ಲದಿದ್ದರೂ ಜನಸಾಗರವೇ ಹರಿದು ಬಂದಿತ್ತು. ಸ್ಥಳೀಯರಿಗೆ ಆದ್ಯತೆ ನೀಡುವಂತೆ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ದೇವಾಲಯದ ಬಳಿ ಪ್ರತಿಭಟನೆ ನಡೆಸಿದ್ದರಿಂದ ಕೆಲ ಸಮಯ ಭಕ್ತರ ದರ್ಶನಕ್ಕೆ ಅವಕಾಶ ನೀಡಲಾಗಿತ್ತು. ಹೀಗಾಗಿ ನೂಕುನುಗ್ಗಲು ಉಂಟಾಗಿ ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡುವಂತಾಯಿತು.

### ಟಿಕೆಟ್, ಪ್ರಸಾದದ ವ್ಯವಸ್ಥೆ

ಕಳೆದ ಬಾರಿಯಂತೆ 1,000ರೂ. ಟಿಕೆಟ್‌ಗೆ 2 ಲಾಡು, 300ರೂ. ಟಿಕೆಟ್‌ಗೆ 1 ಲಾಡು, ಇಸ್ಕಾನ್ ಸಂಸ್ಥೆ ಮೂಲಕ ದೊನ್ನೆ ಪ್ರಸಾದ, ಲಾಡು ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ದರ್ಶನಕ್ಕಾಗಿ ಆನ್‌ಲೈನ್‌ನಲ್ಲಿ ಮೂರು ರೀತಿಯಲ್ಲಿ ಟಿಕೆಟ್ ಪಡೆಯಲು ಅವಕಾಶ ನೀಡಲಾಗಿದೆ. ಹಾಸನಾಂಬ ವೆಬ್‌ಸೈಟ್, ಹಾಸನಾಂಬ ಆ್ಯಪ್, ವಾಟ್ಸ್‌ಆ್ಯಪ್ ಚಾಟ್ ಬಾಟ್‌ನಲ್ಲಿ ಟಿಕೆಟ್ ಬುಕ್ ಮಾಡಿಕೊಳ್ಳಬಹುದಾಗಿದೆ. ಜೊತೆಗೆ ಗೋಲ್ಡ್ ಪಾಸ್ ವ್ಯವಸ್ಥೆ ಮಾಡಲಾಗಿದೆ. ಪಾರ್ಕಿಂಗ್‌ಗಾಗಿ ನಗರದ ಕೆಹೆಚ್‌ಬಿ ಲೇಔಟ್, ಹೊಸಬಸ್ ನಿಲ್ದಾಣ ಸಮೀಪ, ಅರಕಲಗೂಡು-ಗೊರೂರು ರಸ್ತೆ, ದನಗಳ ಸಂತೆ ಮೈದಾನ, ಸಂತೆ ಮೈದಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. ಭಕ್ತರು ತಮ್ಮ ಪಾದರಕ್ಷೆಗಳನ್ನು ಬಿಡಲು ಬಸ್ ಹಾಗು ರೈಲ್ವೆ ನಿಲ್ದಾಣಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.



### ದರ್ಶನೋತ್ಸವಕ್ಕೆ ಸಕಲ ಸಿದ್ಧತೆ

ಹಾಸನಾಂಬ ದರ್ಶನೋತ್ಸವಕ್ಕೆ ಜಿಲ್ಲಾಡಳಿತದಿಂದ ಎಲ್ಲಾ ರೀತಿಯಲ್ಲಿ ಸಿದ್ಧತೆ ಮಾಡಿಕೊಂಡಿದೆ. ದೇವಾಲಯದ ಮುಂಭಾಗ ಬೃಹದಾಕಾರದ ಸ್ವಾಗತ ಕಮಾನು, ಬಗೆಬಗೆಯ ಹೂಗಳಿಂದಲೇ ನಿರ್ಮಾಣ ಮಾಡಿರುವ ಆನೆ, ಶಿವಲಿಂಗ, ಕಳಸ, ದೀಪ, ಓಂ, ತಬಲ, ಶಂಖ ಕಲಾಕೃತಿಗಳು ಭಕ್ತರನ್ನು ಆಕರ್ಷಿಸುತ್ತಿವೆ.

ಭಕ್ತರು ಸರದಿ ಸಾಲಿನಲ್ಲಿ ನಿಲ್ಲುವ ಕಡೆ ಸುಸಜ್ಜಿತ ಬ್ಯಾರಿಕೇಡ್ ಜೊತೆಗೆ, ಅಲ್ಲಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಬಿಸಿಲಿನಲ್ಲಿ ಪಾದ ಸುಡದಂತೆ ನೆಲಹಾಸು ಹಾಕಲಾಗಿದೆ. ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಹೊರ ಜಿಲ್ಲೆಗಳಿಂದ ಪೊಲೀಸರನ್ನ ಕರೆಸಿಕೊಂಡಿದ್ದು, ಮೂರು ಪಾಳಿಯದಲ್ಲಿ 1800 ಕರ್ತವ್ಯ ನಿರ್ವಹಿಸಲಿದ್ದಾರೆ. ಸ್ಕೌಟ್ ಅಂಡ್ ಗೈಡ್ಸ್, ಗೃಹರಕ್ಷಕ ದಳದ ಸಿಬ್ಬಂದಿಯನ್ನೂ ನಿಯೋಜನೆ ಮಾಡಲಾಗಿದೆ.

## ನಾಡು ಸುಕ್ಷೇಮವಾಗಿರುವಂತೆ ಹಾಸನಾಂಬ ಆಶೀರ್ವದಿಸಲಿ : ಆದಿಚುಂಚನಗಿರಿ ಶ್ರೀ

• ಪ್ರಜೋದಯ ವರದಿ



**ಹಾಸನ:** ದೇಶದ ಬೆನ್ನೆಲುಬಾಗಿರುವ ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗಬೇಕು. ಹಾಸನಾಂಬ, ಸಿದ್ದೇಶ್ವರ ಸ್ವಾಮಿ ನಾಡಿನ ಸಮಸ್ತ ಭಕ್ತರು ಸುಕ್ಷೇಮವಾಗಿರುವಂತೆ ಆಶೀರ್ವದಿಸುವಂತಾಗಲಿ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಹೇಳಿದರು.

ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಮಾತನಾಡಿದ ಅವರು, ಜನತ್ತಿನಲ್ಲಿ ಒಂದು ಶಕ್ತಿ ಇದೆ, ದೇವನೊಬ್ಬ ನಾಮ ಹಲವು ಅನ್ನೋ ಹಾಗೆ ಸೃಷ್ಟಿ, ಸ್ಥಿತಿ, ಲಯ ರೂಪದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ತ್ರಿಮೂರ್ತಿಗಳಿದ್ದಾರೆ. ಅದಕ್ಕೆ ಪ್ರತಿರೂಪವಾಗಿ ಸರಸ್ವತಿ, ಲಕ್ಷ್ಮೀ, ಕಾಳಿ ರೂಪದಲ್ಲಿ ಮಾತೆಯರು ಇಲ್ಲಿ ನೆಲೆಸಿದ್ದಾರೆ. ಜಿಲ್ಲೆಯಲ್ಲಿ ನೆಲೆಗೊಂಡಿರುವ ಸರಸ್ವತಿ ಮಾತೆ ಸೃಷ್ಟಿ ಕ್ರಿಯೆಯನ್ನು, ಸ್ಥಿತಿ ಕಾರ್ಯವನ್ನು ಲಕ್ಷ್ಮೀದೇವಿಯೂ, ಲಯದ ಕಾರ್ಯವನ್ನು ಕಾಳಿಯ ರೂಪದಲ್ಲಿ ನಿರ್ವಹಿಸಲಾಗುತ್ತಿದೆ. ಆ ದೇವತೆಗಳಿಗೆ ಇಲ್ಲಿ ಪೂಜೆ ಸಲ್ಲಿಸಲಾಗುತ್ತಿದೆ ಎಂದು ತಿಳಿಸಿದರು.

ನವರಾತ್ರಿ ಮುಗಿದ ಬಳಿಕ ಹಾಸನಾಂಬ ದರ್ಶನ ಆರಂಭವಾಗಿದೆ. ಸಚಿವರಾದ ಕೃಷ್ಣ ಬೈರೇಗೌಡ ಅವರು ಮುಂದೆ ನಿಂತು ಉತ್ತಮ ವ್ಯವಸ್ಥೆ ಮಾಡಿದ್ದಾರೆ. ಸಕಲ ಭಕ್ತರು ಉತ್ಸವದಲ್ಲಿ ಭಾಗಿಯಾಗಬೇಕು. ಆಧುನಿಕ ಶೈಲಿಯಲ್ಲಿ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದರು.

ತುಮಕೂರು ಸಿದ್ದಗಂಗಾ ಮಠದ ಕಿರಿಯ ಶ್ರೀ ಶಿವಸಿದ್ದೇಶ್ವರ ಸ್ವಾಮೀಜಿ ಅವರು ಮಾತನಾಡಿ, ಭಾರತದ ಆಧ್ಯಾತ್ಮ, ಈ ಪರಂಪರೆಯಲ್ಲೂ ಮಾನವ ಶಕ್ತಿಗೂ ಬೆಲೆ ಇದೆ. ಆದರೆ, ಮನುಷ್ಯ ಶಕ್ತಿಗೂ ಮೀರಿದ ಇನ್ನೊಂದು ಶಕ್ತಿ ಇದೆ. ಮನುಷ್ಯನಲ್ಲಿ ತಾಮಸ ಶಕ್ತಿ ಹೆಚ್ಚಾದಾಗ ಆತನನ್ನು ಸಮಚಿತ್ತ ಸ್ಥಿತಿಗೆ ತರುವ ಶಕ್ತಿ ಭೂಮಿ ಮೇಲೆ ಉದಯಿಸಲಿದೆ. ಅದೇ ದೈವ ಸ್ವರೂಪದ ಶಕ್ತಿ. ನಾಡಹಬ್ಬ ದಸರಾ ಮುಗಿದ ಕೂಡಲೇ ಹಾಸನಾಂಬ ದರ್ಶನದಲ್ಲಿ ನಾವು ಭಾಗಿಯಾಗುತ್ತಿದ್ದೇವೆ. ಶಕ್ತಿಯ ಆರಾಧನೆ ಸಂತೋಷ ಕೊಡುತ್ತದೆ. ಶಿವ ಶಕ್ತಿಯ ಪ್ರತಿರೂಪ ಹೆಗ್ಗಳಿಕೆಯ ಈ ಹಾಸನಾಂಬ ಕ್ಷೇತ್ರ. ನಾಡಿನ ಜನರ ಮೇಲೆ ದೇವಿಯ ಆಶೀರ್ವಾದ ಇರಲಿ, ಕಾಲ ಕಾಲಕ್ಕೆ ಮಳೆ, ಬೆಳೆ ಆಗಿ, ಜನರು ಸುಭಿಕ್ಷವಾಗಿರಲಿ ಎಂದು ಶುಭಕೋರಿದರು.

## ಭದ್ರತಾ ಲೋಪ ಸಹಿಸಲ್ಲ, ಎಚ್ಚರ ವಹಿಸಿ




• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಉತ್ಸವದಲ್ಲಿ ಭದ್ರತಾ ಲೋಪ ಸಹಿಸಲು ಸಾಧ್ಯವಿಲ್ಲ. ಅನಾಹುತ ನಡೆಯುವ ಮುನ್ನ ಎಚ್ಚರಿಕೆ ವಹಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಗುರುವಾರ ಸಂಜೆ ನಡೆದ ತುರ್ತು ಸಭೆಯಲ್ಲಿ ಮಾತನಾಡಿದ ಅವರು, ದೇವಿ ದರ್ಶನಕ್ಕೆ ಬರುವ ಸಾರ್ವಜನಿಕರಿಗೆ ಸಮಸ್ಯೆಯಾಗಬಾರದು. ದೇವಾಲಯಕ್ಕೆ ಪ್ರತಿ ದಿನ ಎಷ್ಟು ಜನರ ಆಗಮನ, ನಿರ್ಗಮನವಾಗುತ್ತಿದೆ ಎಂಬ ಕುರಿತು ಅಧಿಕಾರಿಗಳು ನಿಗಾ ವಹಿಸಬೇಕೆಂದು ತಿಳಿಸಿದರು.

ಜನದಟ್ಟಣೆ ಹೆಚ್ಚಾದಾಗ ಅನಾಹುತ ತಡೆಯುವುದೇ ನಮ್ಮ ಕೆಲಸ. ಹೀಗಾಗಿ ಎಲ್ಲಾ ಅಧಿಕಾರಿಗಳೂ ನಾಯಕತ್ವ ಗುಣದ ಜೊತೆ ಕೆಲಸ ಮಾಡಬೇಕು. ಭದ್ರತಾ ವೈಫಲ್ಯವಾಗದಂತೆ ಪೊಲೀಸರು ಎಚ್ಚರ ವಹಿಸಬೇಕು. ಟ್ರಾಫಿಕ್ ಸಮಸ್ಯೆಗಳ ಬಗ್ಗೆಯೂ ಎಚ್ಚರಿಕೆವಿರಬೇಕು. ದೇವಾಲಯದ ಒಳಗೆ ಎಸ್ಕಾರ್ಟ್ ವಾಹನಗಳಿಗೆ ಅವಕಾಶ ಇಲ್ಲವೆಂದು ಹೇಳಿದರು. ಸಂಸದ ಶ್ರೇಯಸ್ ಪಟೇಲ್, ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ ಮತ್ತಿತರರು ಹಾಜರಿದ್ದರು.

### ಇಂದು ಸಂಜೆಯವರೆಗೆ ಮಾತ್ರ ದರ್ಶನ

**ಹಾಸನ :** ಶುಕ್ರವಾರ ಬೆಳಿಗ್ಗೆ 6 ಗಂಟೆಗೆ ಆರಂಭವಾಗುವ ಸಾರ್ವಜನಿಕ ದರ್ಶನ ಸಂಜೆ 7 ಗಂಟೆವರೆಗೆ ಮಾತ್ರ ಇರಲಿದೆ. ಮೊದಲ ದಿನವಾಗಿರುವುದರಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು, ರಾಜ್ಯ ಹೊರ ರಾಜ್ಯದಿಂದ ಗಣ್ಯರು, ಶಾಸಕರು, ಸಚಿವರ ದಂಡೇ ಹರಿದು ಬರುವ ನಿರೀಕ್ಷೆ ಇದೆ. ಅ.10 ರಿಂದ 22ರ ವರೆಗೆ ಮುಂಜಾನೆ 5 ಗಂಟೆಯಿಂದ ನೈವೇದ್ಯ ಸಮಯ ಹೊರತು ಪಡಿಸಿ ದಿನದ 24 ಗಂಟೆಯೂ ದರ್ಶನ ಇರಲಿದೆ. ಅ.11ರಿಂದ ಬೆಳಿಗ್ಗೆ 5 ಗಂಟೆಯಿಂದ ಮಧ್ಯಾಹ್ನ 2ವರೆಗೆ 2 ರಿಂದ 3.30 ರವರೆಗೆ ನೈವೇದ್ಯ ಇರಲಿದೆ. ಮಧ್ಯಾಹ್ನ 3.30ರಿಂದ ಬೆಳಗಿನ ಜಾವ 3 ಗಂಟೆವರೆಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

### ಹೆಲಿರೈಡ್, ಟೂರ್ ಪ್ಯಾಕೇಜ್‌ಗೆ ಚಾಲನೆ

• ಪ್ರಜೋದಯ ವರದಿ



**ಹಾಸನ:** ಹಾಸನಾಂಬ ದರ್ಶನೋತ್ಸವ ಮತ್ತು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿರುವ ಆಗಸದಿಂದ ಹಾಸನ ಹೆಲಿರೈಡ್, ಟೂರ್ ಪ್ಯಾಕೇಜ್‌ಗೆ ಗುರುವಾರ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಚಾಲನೆ ನೀಡಿದರು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ ಹಾಜರಿದ್ದರು.

ನಗರದ ಚನ್ನಪಟ್ಟಣ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸಮೀಪದಲ್ಲಿರುವ ಹೆಲಿಪ್ಯಾಡ್‌ನಲ್ಲಿ ಹೆಲಿರೈಡ್ ಮೂಲಕ ನಗರ ಪ್ರದಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಆಸಕ್ತರು 4,300ರೂ. ಪಾವತಿ ಮಾಡಿ ಹೆಲಿರೈಡ್ ಮಾಡಬಹುದಾಗಿದೆ. ಅ.10 ರಿಂದ 22ರವರೆಗೆ ಪ್ರತಿದಿನ ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆವರೆಗೆ ಹೆಲಿಕಾಪ್ಟರ್‌ನಲ್ಲಿ ಹಾಸನ ನಗರ ಮತ್ತು ತಾಲ್ಲೂಕಿನ ಸೀಗೆಗುಡ್ಡ ಸೇರಿ ಪ್ರಮುಖ ಸ್ಥಳಗಳನ್ನು ಆಗಸದಿಂದ ಕಣ್ತುಂಬಿಕೊಳ್ಳಬಹುದಾಗಿದೆ. ದರ್ಶನಕ್ಕೆ ಬರುವ ಭಕ್ತರಿಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಟೂರ್ ಪ್ಯಾಕೇಜ್ ನೀಡಲಾಗಿದೆ. ಜಿಲ್ಲೆಯ ಪ್ರಸಿದ್ಧ ಸ್ಥಳಗಳಾದ ಬೇಲೂರು, ಹಳೇಬೀಡು, ಶ್ರವಣ ಬೆಳಗೊಳ, ಮಂಜ್ರಾಬಾದ್ ಕೋಟೆ, ಯಗಚಿ ಜಲಾಶಯ, ಹೇಮಾವತಿ ಜಲಾ ಶಯ, ಮೂಕನ ಮನೆ ಫಾಲ್ಸ್, ಇತರೆ ಪ್ರೇಕ್ಷಣಿಯ ಸ್ಥಳಗಳನ್ನು ವೀಕ್ಷಣೆ ಮಾಡಬಹುದಾಗಿದೆ.

## ಸುಗಮ ದರ್ಶನಕ್ಕೆ ಎಲ್ಲರ ಸಹಕಾರ ಅಗತ್ಯ : ಕೃಷ್ಣಬೈರೇಗೌಡ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ಉತ್ಸವ ಸುಗಮವಾಗಿ ನಡೆಯಬೇಕು, ಭಕ್ತರು ಖುಷಿಯಿಂದ ದೇವಿಯ ದರ್ಶನ ಮಾಡಿ ಹೋಗಬೇಕು. ಅಹಿತಕರ ಘಟನೆ ನಡೆಯದಂತೆ ಎಲ್ಲರೂ ಸಹಕಾರ ಕೊಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕೋರಿದರು.

ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಮಾತನಾಡಿದ ಅವರು, ಈ ಬಾರಿಗೆ ಗಣ್ಯರ ಜೊತೆಗೆ ಸಾಮಾನ್ಯ ಭಕ್ತರಿಗೂ ಮೊದಲ ಆದ್ಯತೆ ಸಿಗಬೇಕೆಂಬುದು ನಮ್ಮೆಲ್ಲರ ಆಶಯ. ದೂರದಿಂದ ಬಂದಿರುವವರಿಗೆ ಹೆಚ್ಚಿನ ಆದ್ಯತೆ ಸಿಗಬೇಕು. ಗಣ್ಯರಿಗೆ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12 ವರೆಗೆ ಮಾತ್ರ ದರ್ಶನ ಇರಲಿದೆ. ಅವರನ್ನು ಪ್ರವಾಸಿ ಮಂದಿರದಿಂದ ಜಿಲ್ಲಾಡಳಿತದ ವಾಹನದಲ್ಲೇ ಕರೆದೊಯ್ಯಲಾಗುವುದೆಂದರು.

ಹಾಸನಾಂಬ ಹಾಗು ಸಿದ್ದೇಶ್ವರ ಸ್ವಾಮಿ ಜಾತ್ರಾಮಹೋತ್ಸವ ವಿಧಿವತ್ತಾಗಿ, ಸಂಪ್ರದಾಯ ಬದ್ಧವಾಗಿ ಶಾಸ್ತ್ರೋಕ್ತವಾಗಿ ಹಲವು ಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಆರಂಭವಾಗಿದೆ. ಎಲ್ಲವೂ ಸುಗಮವಾಗಿ ನಡೆದಿರುವುದು ಸಂತಸದ ವಿಷಯ. ಇದರಿಂದ ನಾಡಿಗೆ ಒಳ್ಳೆಯದಾಗಲಿದೆ, ಜನರಿಗೆ ಒಳಿತಾಗಲಿದೆ ಎಂಬುದು ನನ್ನ ಸದಾಶಯ ಎಂದರು.

ಹಾಸನಾಂಬ ದರ್ಶಘನೋತ್ಸವಕ್ಕೆ ನಾವೆಲ್ಲರೂ ಸೇರಿ ಚಾಲನೆ ನೀಡಿದ್ದೇವೆ. ಶುಕ್ರವಾರ ಬೆಳಿಗ್ಗೆ 6 ರಿಂದ ಸಂಜೆ 7 ಗಂಟೆವರೆಗೆ ಮಾತ್ರ ದರ್ಶನ ಇರಲಿದೆ. ಭಕ್ತರು ಸರದಿ ಸಾಲಿನಲ್ಲಿ ಬಂದು ದೇವಿಯ ದರ್ಶನ ಪಡೆಯಬೇಕು. ಅ.22 ರವರೆಗೂ ನೈವೇದ್ಯ, ಮಹಾಮಂಗಳಾರತಿ ಸಮಯ ಹೊರತು ಪಡಿಸಿ ಬೆಳಿಗ್ಗೆಯಿಂದ ನಿರಂತರವಾಗಿ ದೇವಿಯ ದರ್ಶನ ವ್ಯವಸ್ಥೆ ಇರಲಿದೆ. ಸಣ್ಣಪುಟ್ಟ ನ್ಯೂನ್ಯತೆ ಇದ್ದರೆ ಕ್ಷಮಿಸಿ, ನೆಮ್ಮದಿ ದರ್ಶನಕ್ಕೆ ಮಾಡಿಕೊಂಡು ಹೋಗಿ ಎಂದು ಹೇಳಿದರು.



ನನ್ನ ಕ್ಷೇತ್ರದ ಜನರೂ ಪಾಸ್ ಕೇಳಿದರು. ಅವರಿಗೆ ನಾನೇ 5 ಲ.ರೂ. ಹಣ ಮಾಡಿ ಟಿಕೆಟ್ ಕೊಡಿಸಿದ್ದೇನೆ. ನಾವು ಜವಾಬ್ದಾರಿ ಸ್ಥಾನದಲ್ಲಿರುವವರು, ಸಾರ್ವಜನಿಕರ ಹಿತ ಮರೆಯಬಾರದು.

-ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ

ಈ ವರ್ಷದ ಮಹೋತ್ಸವಕ್ಕೆ ನಾಡು, ದೇಶದಿಂದ ಲಕ್ಷಾಂತರ ಭಕ್ತರು ದರ್ಶನಕ್ಕಾಗಿ ಆಗಮಿಸುವ ನಿರೀಕ್ಷೆ ಇದೆ. ಇಂದು ಸಂಜೆಯಿಂದಲೇ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಉತ್ಸವದ ಕೊನೆಯ ದಿನದವರೆಗೂ ಸಂಜೆ 6 ರಿಂದ ರಾತ್ರಿ 10.30 ವರೆಗೆ, ಹಾಸನಾಂಬ ಜಾನಪದ ಗಾಯನ, ನೃತ್ಯ, ಶಾಸ್ತ್ರೀಯ ಸಂಗೀತದ ರಸದೌತಣ ಭಕ್ತರಿಗೆ ಸಿಗಲಿದೆ ಎಂದು ಹೇಳಿದರು.

ಹೆಲಿ ಟ್ಯೂರಿಸಂ, ಫಲಪುಷ್ಪ ಹಾಗು ವಸ್ತು ಪ್ರದರ್ಶನ ಇರಲಿದ್ದು, ದೇವಿಯ ದರ್ಶನ ಜೊತೆಗೆ ವಿಶೇಷ ಮನರಂಜನೆಯನ್ನೂ ಪಡೆಯಬಹುದು. ಹಾಸನ ಭೇಟಿಗೆ ಬರುವವರ ನೆನಪಲ್ಲಿ ಉಳಿಯಬೇಕು. ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಬಂದ ಜನರು ಸಂತೋಷದಿಂದ ದೇವಿ ದರ್ಶನ, ಮನರಂಜನೆ ಪಡೆದು ಹೋಗಲಿ. ಅದಕ್ಕೆ ಅವಕಾಶ ಮಾಡಿ ಕೊಡೋಣವೆಂದು ತೀರ್ಮಾನ ಮಾಡಿದ್ದೇವೆ ಎಂದರು.

## ಮುಡಾ : ಅಂತಿಮ ತನಿಖೆಗೆ 2 ತಿಂಗಳ ಗಡುವು

• ಪ್ರಜೋದಯ ವರದಿ

**ಬೆಂಗಳೂರು:** ಸಿದ್ದರಾಮಯ್ಯ ಹಾಗು ಪತ್ನಿ ವಿರುದ್ಧದ ಮುಡಾ ಪ್ರಕರಣದ ತನಿಖೆ ಪೂರ್ಣಗೊಳಿಸಲು ತನಿಖಾ ಸಂಸ್ಥೆಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 2 ತಿಂಗಳು ಗಡುವು ನೀಡಿದೆ.

ಕಳೆದ 6 ತಿಂಗಳಿನಿಂದ ತನಿಖೆಯಲ್ಲಿ ಪ್ರಗತಿ ಆಗದ ಹಿನ್ನಲೆ ಅರ್ಜಿದಾರರು ಬಿ ರಿಪೋರ್ಟ್ ಸಲ್ಲಿಸುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಈ ಅರ್ಜಿಯನ್ನು ನ್ಯಾಯಾಲಯ ವಿಚಾರಣೆ ನಡೆಸಿ ಆದೇಶ ಕಾಯ್ದಿರಿಸಿತ್ತು. 2 ತಿಂಗಳೊಳಗಾಗಿ ತನಿಖೆಯನ್ನು ಸಂಪೂರ್ಣಗೊಳಿಸಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಹೆಚ್ಚುವರಿಯಾಗಿ ಕಾಲಾವಕಾಶ ಕೋರುವಂತಿಲ್ಲವೆಂದು ನ್ಯಾಯಾಲಯ ಸೂಚಿಸಿದೆ. ಲೋಕಾಯುಕ್ತ ಪೊಲೀಸರು ತನಿಖೆಯ ನೆಪದಲ್ಲಿ ಕಾಲಹರಣ ಮಾಡುತ್ತಿದ್ದಾರೆ. ಹೀಗಾಗಿ ಬಿ ರಿಪೋರ್ಟ್‌ಗೆ ತೀರ್ಮಾನ ಮಾಡುವಂತೆ ಅರ್ಜಿ ಸಲ್ಲಿಸಲಾಗಿತ್ತು. ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಲಯ ನ. 15ಕ್ಕೆ ವಿಚಾರಣೆ ಮುಂದೂಡಿದೆ. ತನಿಖಾಧಿಕಾರಿ ಬದಲಾವಣೆ ಮಾಡುವಂತೆ ಕೋರಿದ್ದ ಮಧ್ಯಂತರ ಅರ್ಜಿಯನ್ನು ನ್ಯಾಯಾಲಯ ಇದೇ ವೇಳೆ ವಜಾ ಮಾಡಿದೆ.

## ಹೈಕೋರ್ಟ್‌ನಲ್ಲಿ ಪ್ರಜ್ವಲ್ ಮೇಲ್ಮನವಿ ವಿಚಾರಣೆ

• ಪ್ರಜೋದಯ ವರದಿ

**ಬೆಂಗಳೂರು :** ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ವಿಧಿಸಿರುವ ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಮಾಜಿ ಸಂಸದ ಪ್ರಜ್ವಲ್ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ಗುರುವಾರ ನಡೆಯಿತು.

ನ್ಯಾಯಮೂರ್ತಿ ಕೆ.ಎಸ್. ಮುದ್ಗಲ್, ನ್ಯಾ.ವೆಂಕಟೇಶ್ ನಾಯ್ಕ್ ಅವರಿದ್ದ ಹೈಕೋರ್ಟ್ ವಿಭಾಗೀಯ ಪೀಠ, ಸಮಗ್ರ ಸಾರಾಂಶ ಸಲ್ಲಿಸಲು ಪ್ರಜ್ವಲ್ ಪರ ವಕೀಲರಿಗೆ ಸೂಚನೆ ನೀಡಿದೆ. ಪ್ರಜ್ವಲ್ ಮೇಲ್ಮನವಿ ಬಗ್ಗೆ ಪ್ರತಿವಾದಿಯಾಗಿ ವಾದಿಸಲು ಎಸ್‌ಪಿಪಿ ನೇಮಕದ ಬಗ್ಗೆಯೂ ಸ್ಪಷ್ಟನೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿ ವಿಚಾರಣೆಯನ್ನು ಅ.28ಕ್ಕೆ ಮುಂದೂಡಿದೆ.

### ಮೇಲ್ಮನವಿಯಲ್ಲಿ ಏನಿದೆ

ರಾಜಕೀಯ ದುರುದ್ದೇಶದಿಂದ ಮಹಿಳೆಯನ್ನು ಅಸ್ತ್ರವಾಗಿಸಿ ಎಫ್‌ಐಆರ್ ದಾಖಲಿಸಲಾಗಿದೆ. 2023 ರಲ್ಲಿ ಫಾರ್ಮ್ ಹೌಸ್‌ನ ಗೃಹ ಪ್ರವೇಶದಲ್ಲಿ ಮಹಿಳೆ ಪಾಲ್ಗೊಂಡಿದ್ದಾರೆ. ಅತ್ಯಾಚಾರವಾಗಿದ್ದರೆ ಮಹಿಳೆ ಗೃಹ ಪ್ರವೇಶಕ್ಕೆ ಹೇಗೆ ಬರುತ್ತಿದ್ದರು. ಈ ಮಹಿಳೆಯಿಂದ 3 ವರ್ಷದ ಬಳಿಕ ಪೊಲೀಸರು ದೂರು ಪಡೆದಿದ್ದಾರೆ. ಸ್ಟೋರ್ ರೂಮಿನಲ್ಲಿ ಬಟ್ಟೆ, ಕೂದಲಿದ್ದ ಬ್ಯಾಗ್‌ನ್ನು ಮಹಿಳೆ ಗುರುತಿಸಿಲ್ಲ. ಬ್ಯಾಟರಿ, ಪೇಂಟ್ ಇದ್ದ ರೂಮಿನಲ್ಲಿ ಮಹಿಳೆಯ ಉಡುಪು ಸಿಕ್ಕಿತೆಂದು ಹೇಳಿದ್ದಾರೆ. ಲಾಕ್ ಆಗಿದ್ದ ರೂಮಿನಲ್ಲಿ ವೀರ್ಯಾಣುವಿದ್ದ ಬಟ್ಟೆ ಸಿಗಲು ಸಾಧ್ಯವೇ, ಮಹಿಳೆಯ ಸಿಆರ್‌ಪಿಸಿ 164 ಹೇಳಿಕೆಯನ್ನು ಕೋರ್ಟ್ ಗೆ ಹಾಜರುಪಡಿಸಿಲ್ಲ. ವಿಡಿಯೋ ಇದ್ದ ಮೊಬೈಲ್‌ನ್ನು ವಶಕ್ಕೆ ಪಡೆದಿಲ್ಲ. ಹೀಗಾಗಿ ಶಿಕ್ಷೆ ರದ್ದುಪಡಿಸುವಂತೆ ಪ್ರಜ್ವಲ್ ಪರ ವಕೀಲರು ಹೈಕೋರ್ಟ್‌ಗೆ ಸಲ್ಲಿಸಿರುವ ಮೇಲ್ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

## ಕಾಫಿ ತೋಟದಲ್ಲಿ ವ್ಯಕ್ತಿ ಶವ ಪತ್ತೆ: ಕೊಲೆ ಶಂಕೆ

• ಪ್ರಜೋದಯ ವರದಿ



**ಸಕಲೇಶಪುರ:** ಕಾಫಿ ತೋಟದ ಲೈನ್ ಮನೆಯಲ್ಲಿ ವ್ಯಕ್ತಿಯ ಶವ ಪತ್ತೆಯಾಗಿದ್ದು, ನಾಪತ್ತೆಯಾಗಿರುವ ಸ್ನೇಹಿತನೇ ಕೊಲೆಗೈದಿ ರುವ ಶಂಕೆ ವ್ಯಕ್ತವಾಗಿದೆ.

ಯಸಳೂರು ಹೋಬಳಿ ಗೋಪಾಲಪುರ ಸಮೀಪದ ತಾರಿಕ್ ಬೈಲು ಗ್ರಾಮದ ಲೈನ್ ಮನೆಯಲ್ಲಿ ಮೃತದೇಹ ಪತ್ತೆಯಾಗಿದೆ. ತಾಲ್ಲೂಕಿನ ಬೆಳಗೋಡು ಹೋಬಳಿ ಜಮ್ಮನಹಳ್ಳಿ ಗ್ರಾಮದ ಸತೀಶ್ (35) ಮೃತರು. ಸತೀಶ್ ತನ್ನ ಸ್ನೇಹಿತ ಕೃಷ್ಣ ಎಂಬುವನ ಜೊತೆ ಸಹದೇವ್ ಶೆಟ್ಟಿ ಎಂಬುವವರ ಕಾಫಿ ತೋಟಕ್ಕೆ ಕೂಲಿ ಕೆಲಸ ಕ್ಕೆ ತೆರಳಿದ್ದರು. ಇಬ್ಬರೂ ತೋಟದ ಕಾರ್ಮಿಕರ ವಸತಿ ಗೃಹದಲ್ಲಿರುತ್ತಿದ್ದರು. ಸೋಮವಾರ ಸ್ವಗ್ರಾಮ ಜಮ್ಮನಹಳ್ಳಿಯಿಂದ ಕೆಲಸಕ್ಕೆ ತೆರಳಿದ್ದ.

ಗುರುವಾರ ಮಧ್ಯಾಹ್ನ ಸತೀಶ್ ಮೃತಪಟ್ಟಿರುವ ವಿಚಾರ ಪಕ್ಕದ ನಿವಾಸಿಗಳಿಂದ ಪೊಲೀಸರಿಗೆ ತಿಳಿದಿದೆ. ಯಸಳೂರು ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಯಾವಾಗಲೂ ಸತೀಶ್ ಜೊತೆಗೆ ಇರುತ್ತಿದ್ದ ಕೃಷ್ಣ ಬುಧವಾರ ಸಂಜೆಯಿಂದ ನಾಪತ್ತೆಯಾಗಿದ್ದಾನೆ. ಹಾಗಾಗಿ ಆತನೇ ಕೊಲೆ ಮಾಡಿರುವ ಅನುಮಾನ ವ್ಯಕ್ತವಾಗಿದೆ. ಬುಧವಾರ ಸಂಜೆ ಇಬ್ಬರು ಪಾನ ಮತ್ತರಾಗಿ ಹೊಡೆದಾ ಡಿದ್ದರು. ಕುಡಿದ ಅಮಲಿನಲ್ಲಿ ಕೃಷ್ಣ ದೊಣ್ಣೆಯಿಂದ ಸತೀಶ್‌ನ ತಲೆಗೆ ಹೊಡೆದಿರಬಹುದೆಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಅದಕ್ಕೆ ಸಾಕ್ಷಿ ಎಂಬಂತೆ ಕೊಲೆಯಾಗಿರುವ ಸತೀಶ್‌ನ ಮೃತ ದೇಹದ ಪಕ್ಕದಲ್ಲಿ ಮರದ ದೊಣ್ಣೆ ಪತ್ತೆಯಾಗಿದೆ. ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ಹಿಮ್ಸ್‌ಗೆ ರವಾನಿಸಲಾಗಿದೆ. ಕೃಷ್ಣನ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ. ಯಸಳೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗಣತಿಯಿಂದ ಹೊರಗುಳಿದವರ ಪತ್ತೆಗೆ ಸೂಚನೆ | ನಗರ ಪ್ರದೇಶದಲ್ಲಿ ಹೆಚ್ಚಿದ ಸಮಸ್ಯೆ

# ಸಾಮಾಜಿಕ ಸಮೀಕ್ಷೆಗೆ ಸಿಗದ ಜನಸಂಖ್ಯಾ ಮಾಹಿತಿ

• ಪ್ರಜೋದಯ ವರದಿ

**ಹಾಸನ:** ನಿಗದಿತ ಅವಧಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮುಗಿಯದ ಹಿನ್ನಲೆಯಲ್ಲಿ ದಸರಾ ರಜೆ ವಿಸ್ತರಿಸಿ ಶಿಕ್ಷಕರಿಗೆ ಮತ್ತೆ ಎಂಟು ದಿನಗಳ ಸಮಯಾವಕಾಶ ನೀಡಲಾಗಿದೆಯಾದರೂ ನಗರ ವ್ಯಾಪ್ತಿಯಲ್ಲಿ ಸಮೀಕ್ಷೆ ಪಾರದರ್ಶಕವಾಗಿ ನಡೆಯುತ್ತಿಲ್ಲವೆಂಬ ವ್ಯಾಪಕ ದೂರುಗಳು ಕೇಳಿಬಂದಿವೆ.

ಗ್ರಾಮೀಣ ಭಾಗದಲ್ಲಿ ಸಮೀಕ್ಷೆ ಯಶಸ್ವಿಯಾಗಿದೆಯಾದರೂ ನಗರ, ಪಟ್ಟಣಗಳಲ್ಲಿ ಗಣತಿದಾರರು ಮನೆಗಳಿಗೆ ಭೇಟಿ ನೀಡಿ ಕುಟುಂಬದ ಎಲ್ಲಾ ಸದಸ್ಯರ ಮಾಹಿತಿ ಪಡೆಯದೆ ಕೇವಲ ಒಬ್ಬರನ್ನು ಮಾತನಾಡಿಸಿ ಮುಂದಕ್ಕೆ ಹೋಗುತ್ತಿದ್ದಾರೆ. ಅದರಿಂದ ನಿಖರ ಜನಸಂಖ್ಯೆ ತಿಳಿಯುವುದು ಕಷ್ಟವಾಗುತ್ತಿದೆ.

### ಪಡಿತರ ಕಾರ್ಡ್ ಇಲ್ಲದಿರುವುದು ತೊಂದರೆ

ನಗರ ಪ್ರದೇಶಗಳಲ್ಲಿ ಬಹುತೇಕರು ನೌಕರರು ಇರುತ್ತಾರೆ. ಕುಟುಂಬದಲ್ಲಿ ಎಪಿಎಲ್ ಕಾರ್ಡ್ ಇರುತ್ತದೆ ಅಥವಾ ಇರುವುದಿಲ್ಲ. ಅಂತಹ ಮನೆಗಳಿಗೆ ಭೇಟಿ ನೀಡುವ ಗಣತಿದಾರರು ಕುಟುಂಬದ ಎಲ್ಲಾ ಸದಸ್ಯರ ಆಧಾರ್ ನಂಬರ್ ನಮೂದಿಸಬೇಕು. ಹಾಗೆ ಮಾಡಲು 20 ರಿಂದ 30 ನಿಮಿಷ ಸಮಯ ಬೇಕಾಗುವುದರಿಂದ ಕಾಯುವ ಬದಲು ಸಮೀಕ್ಷೆ ಅಪೂರ್ಣವಿದ್ದರೂ ಮುಗಿದಿದೆ ಎಂದು ಮೊಬೈಲ್ ಅಪ್ಲಿಕೇಷನ್ ಆಫ್ ಮಾಡುತ್ತಿದ್ದಾರೆ. ಮತ್ತೆ ಕೆಲವು ಕಡೆ ಸಾರ್ವಜನಿಕರು ಸಕಾರಾತ್ಮಕವಾಗಿ ಸ್ಪಂದಿಸದೆ ಇರುವುದು ಸಮಸ್ಯೆ ತಂದೊಡ್ಡಿದೆ.

ಜನಸಂಖ್ಯೆ ತಿಳಿಯಲು ಕಷ್ಟ: ಹಾಸನ ಜಿಲ್ಲೆಯಲ್ಲಿ 18.50 ಲಕ್ಷ ಜನಸಂಖ್ಯೆ ಇದೆ ಎಂದು ಅಂದಾಜಿಸಲಾಗಿದೆ. ಸೆ. 22 ರಿಂದ ಆರಂಭವಾಗಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿಯಲ್ಲಿ 15 ಲಕ್ಷ ಜನರಷ್ಟೇ ಲೆಕ್ಕಕ್ಕೆ ಸಿಕ್ಕಿದ್ದಾರೆ. ಉಳಿದ 3.50 ಲಕ್ಷ ಜನರು ಎಲ್ಲಿಗೆ ಹೋದರೆಂಬ ಮಾಹಿತಿಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕೇಳಿದೆ. ಸಮೀಕ್ಷೆ ವೇಳೆ ಕೇವಲ ಕುಟುಂಬದಲ್ಲಿ ಒಬ್ಬರು ಅಥವಾ ಇಬ್ಬರು ಮಾತ್ರ ನಮೂದಾಗಿರುವ ಕುಟುಂಬಗಳನ್ನು ಪತ್ತೆ ಹಚ್ಚಿ



ಮತ್ತೊಮ್ಮೆ ಭೇಟಿ ನೀಡಿ ಪೂರ್ಣ ಮಾಹಿತಿ ಪಡೆಯಲು ಸೂಚಿಸಲಾಗಿದೆ. ಸರ್ಕಾರದ ಈ ನಿಯಮದಿಂದ ಸಮೀಕ್ಷಾದಾರರು ಮತ್ತೊಮ್ಮೆ ಮನೆ ಮನೆಗೆ ಭೇಟಿ ನೀಡುವ ಅನಿವಾರ್ಯತೆ ಸೃಷ್ಟಿಯಾಗಿದೆ.

### 40 ಸಾವಿರ ಮನೆಗಳು ಬಾಕಿ

ಜಿಲ್ಲಾದ್ಯಂತ 5,42,335 ಕುಟುಂಬಗಳನ್ನು ಸಮೀಕ್ಷೆಗಾಗಿ ಗುರುತಿಸಲಾಗಿತ್ತು. ಅ.23 ರಿಂದಲೇ ಸೆಸ್ಕಾಂ ಸಿಬ್ಬಂದಿ ಮನೆ ಮನೆಗೆ ಸ್ಟಿಕ್ಕರ್ ಅಂಟಿಸಿ ಜಿಯೋ ಟ್ಯಾಗಿಂಗ್ ಅಳವಡಿಕೆ ಮಾಡಿದ್ದರು. ಆರ್‌ಆರ್ ನಂಬರ್ ಆಧರಿಸಿ ಸಮೀಕ್ಷೆದಾರರು ಮನೆ ಮನೆಗೆ ಭೇಟಿ ನೀಡಿದ್ದಾರೆ. ಆದರೆ, ಸ್ಟಿಕ್ಕರ್‌ಗಳನ್ನು ವಾಸದ ಮನೆಗಳು ಮಾತ್ರವಲ್ಲದೆ ದೇವಸ್ಥಾನ, ಶಾಲಾ-ಕಾಲೇಜು ಕಟ್ಟಡ, ಅಂಗನವಾಡಿ, ವಾಣಿಜ್ಯ ಮಳಿಗೆಗಳಿಗೂ ಅಂಟಿಸಲಾಗಿದೆ. ಒಂದು ಕುಟುಂಬ ಎರಡು ಮನೆಗಳನ್ನು ಹೊಂದಿ ಪ್ರತ್ಯೇಕ ವಿದ್ಯುತ್ ಮೀಟರ್ ಅಳವಡಿಸಿಕೊಂಡಿದ್ದರೆ ಅಲ್ಲಿಗೂ ಸ್ಟಿಕ್ಕರ್ ಅಂಟಿಸಿರುವುದರಿಂದ ಸಮೀಕ್ಷೆದಾರರು ಗೊಂದಲಕ್ಕೆ ಸಿಲುಕಿದ್ದಾರೆ. ವಾಸವಿರದ ಮನೆಗೆ ಸ್ಟಿಕ್ಕರ್ ಅಂಟಿಸಿದ್ದರಿಂದ ಆ ಮನೆಯಲ್ಲಿ ಸಮೀಕ್ಷೆ ಏಕೆ ಮಾಡಿಲ್ಲ ಎಂಬುದಕ್ಕೆ ಕಾರಣ ನೀಡಬೇಕಿರುವುದರಿಂದ ಸಮೀಕ್ಷೆದಾರರು ಹೈರಾಣಾಗಿದ್ದಾರೆ. ಜೊತೆಗೆ ಸ್ಟಿಕ್ಕರ್ ಅಂಟಿಸಿದ್ದರೂ 40 ಸಾವಿರ ಮನೆಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಶಿಕ್ಷಕರಿಗೆ ನೀಡಿದ್ದ ಸಮೀಕ್ಷಾ ಗುರಿ ಮುಗಿದಿದ್ದರೂ ಮನೆಗಳು ಮುಗಿಯದೆ ಇರುವುದು ಹಲವು ಸಮಸ್ಯೆಗೆ ಕಾರಣವಾಗಿದೆ. ಹೀಗಾಗಿ ಶಿಕ್ಷಕರಿಗೆ ಕಾರ್ಯಭಾರ ಹೆಚ್ಚಾಗಿದೆ.

ನಗರ ಪ್ರದೇಶಗಳಲ್ಲಿ ಸಮೀಕ್ಷೆ ಸರಿಯಾಗಿ ನಡೆಯುತ್ತಿಲ್ಲ. ಜನಸಂಖ್ಯೆ ನಿಖರವಾಗಿ ತಿಳಿಯುತ್ತಿಲ್ಲವೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಹೇಳಿದ್ದಾರೆ. ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಈ ವರೆಗೆ ಶೇ.93 ರಷ್ಟು ಸಮೀಕ್ಷೆ ಪೂರ್ಣಗೊಂಡಿದ್ದು, ಅ. 8ರೊಳಗೆ ಪೂರ್ಣಗೊಳಿಸಲಾಗುವುದು.

-ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ.

### ಇಷ್ಟವಿಲ್ಲದವರ ಕಾರಣ ಹೇಳಬೇಕು

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಆರಂಭದಲ್ಲೇ ಹಲವು ಸಮುದಾಯಗಳಿಂದ ವಿರೋಧ ವ್ಯಕ್ತವಾದ್ದರಿಂದ ಹೈಕೋರ್ಟ್ ಇಷ್ಟವಿಲ್ಲದವರು ಸಮೀಕ್ಷೆಯಲ್ಲಿ ಭಾಗವಹಿಸದೆ ಇರಬಹುದೆಂದು ಆದೇಶ ನೀಡಿತ್ತು. ಅದರಂತೆ ಗಣತಿದಾರರು ಇಷ್ಟವಿಲ್ಲದವರ ಮನೆಗಳನ್ನು ಹಾಗೆ ಬಿಟ್ಟು ತೆರಳಿದ್ದರು. ಆದರೆ, ಅ.8 ರಂದು ಸಮೀಕ್ಷೆ ವೇಳೆ ಮಾಹಿತಿ ನೀಡದೆ ಇರಲು ಕಾರಣವೇನೆಂದು ಸ್ಪಷ್ಟವಾಗಿ ನಮೂದಿಸಬೇಕೆಂದು ಸರ್ಕಾರ ಸೂಚಿಸಿದೆ. ಹೀಗಾಗಿ ತಮ್ಮ ಕಾರ್ಯ ಮುಗಿಸಿದ್ದ ಶಿಕ್ಷಕರು ಸಹ ಅಂತಹ ಮನೆಗಳನ್ನು ಹುಡುಕಿ ಹೋಗ ಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

## ಚ.ರಾ.ಪಟ್ಟಣ : ತಾಲ್ಲೂಕಿನ ವಿವಿಧೆಡೆ ವ್ಯಾಪಕ ಮಳೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಪಟ್ಟಣ ಸೇರಿ ತಾಲ್ಲೂಕಿನ ವಿವಧೆಡೆ ಬುಧವಾರ ರಾತ್ರಿ ಹದ ಮಳೆಯಾಗಿದ್ದು, ಹಿರೀಸಾವೆ ಹೋಬಳಿ ವ್ಯಾಪ್ತಿಯಲ್ಲಿ ವ್ಯಾಪಕ ಮಳೆ ಸುರಿದಿದೆ.

ಹಿರೀಸಾವೆ ಗ್ರಾಮದ ಚರಂಡಿಯಲ್ಲಿ ಮಣ್ಣು ಮುಚ್ಚಿದ್ದರಿಂದ ಮನೆಯೊಂದಕ್ಕೆ ನೀರು ನುಗ್ಗಿದೆ. ಬುಧವಾರ ರಾತ್ರಿ 9 ಗಂಟೆಯಿಂದ 11.30 ರವರೆಗೆ ಜೋರು ಮಳೆ ಸುರಿದಿದೆ. ತೋಟ, ಹೊಲಗಳಲ್ಲಿ ನೀರು ನಿಂತಿದೆ. ಹಿರೀಸಾವೆ ಗ್ರಾಮದ ಒಳಗೆ ಹಾದುಹೋಗಿರುವ ರಾಜ್ಯ ಹೆದ್ದಾರಿ 8 ಕ್ಕೆ ಹೊಸದಾಗಿ ಸೇತುವೆ ನಿರ್ಮಾಣ ಮಾಡಿರುವ ಸ್ಥಳದಲ್ಲಿ ಮಳೆ ನೀರು ರಾಜಕಾಲುವೆಗೆ ಹರಿಯದೆ ರಸ್ತೆಯಲ್ಲಿ ಹರಿದಿದೆ.

ನಂದನ್ ಎಂಬುವವರ ಮನೆಯ ಮುಂಭಾಗದ ಚರಂಡಿಯನ್ನು ಮಣ್ಣಿನಿಂದ ಮುಚ್ಚಿದ್ದರಿಂದ, ರಾತ್ರಿ ಬಿದ್ದ ಮಳೆ ನೀರು ಚರಂಡಿ ತುಂಬಿ ಮನೆ ಮತ್ತು ಅಂಗಡಿಗಳಿಗೆ ನೀರು ನುಗ್ಗಿ ವಸ್ತುಗಳು ನೆನೆದಿವೆ. ರಾತ್ರಿಯೆಲ್ಲಾ ಮನೆಯವರು ನೀರನ್ನು ಹೊರಹಾಕಿದ್ದಾರೆ.

ಹಿರೀಸಾವೆ ಹೋಬಳಿಯಲ್ಲಿ ಹಲವು ದಿನಗಳಿಂದ ಮಳೆ ಇಲ್ಲದೆ ರಾಗಿ, ಜೋಳ ಹಾಗೂ ತೆಂಗು ಸೇರಿದಂತೆ ಹಲವು ಬೆಳೆಗಳು ಒಣಗಿದ್ದವು. ಸದ್ಯ ಸುರಿದ ಹದ ಮಳೆಯಿಂದ ಬೆಳೆಗಳು ಚೇತರಿಸಿಕೊಳ್ಳಲು ಎಂದು ರೈತರು ತಿಳಿಸಿದ್ದಾರೆ.



# ಭಾಷಾ ಗಡಿಯನ್ನು ಮೀರಿಸಿ ಕ್ರೇಜ್ ಹುಟ್ಟುಹಾಕುತ್ತಿರುವ ಸಿನಿಮಾಗಳು

ದೊಡ್ಡ ಬಜೆಟಿನ ಸಿನಿಮಾಗಳು ಪ್ಯಾನ್ ಇಂಡಿಯಾ ಸಿನಿಮಾ ಎನ್ನುವ ಕಾನ್ಸೆಪ್ಟ್‌ನಲ್ಲಿ ಹೆಚ್ಚಾಗಿ ಬರಲು ಆರಂಭಿಸಿದೆ. ಇದರಿಂದಾಗಿ, ಸಿನಿಮಾ ಮಾರುಕಟ್ಟೆ ವಿಸ್ತಾರವಾದರೂ, ಈ ಬಗ್ಗೆ ಕೆಲವು ಅಪಸ್ವರಗಳೂ ಜೋರಾಗಿವೆ. ಪ್ಯಾನ್ ಇಂಡಿಯಾ ಸಿನಿಮಾಗಳು ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದ ಉದಾಹರಣೆಗಳೂ ಇವೆ. ಆದರೆ, ಪ್ಯಾನ್ ಇಂಡಿಯಾ ಸಿನಿಮಾಗಳು ಸದ್ಯ ಭಾರತೀಯ ಮಾರುಕಟೆಯಲ್ಲಿ ಸದ್ದನ್ನಂತೂ ಮಾಡುತ್ತಿದೆ.

ಪ್ಯಾನ್ ಇಂಡಿಯಾ ಮಟ್ಟದಲ್ಲಿ ಸಿನಿಮಾ ಬಿಡುಗಡೆ ಮಾಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ಒಂದು ಫ್ಯಾಷನ್ ಆಗಿದೆಯಾ ಅಥವಾ ಮೂಲ ಭಾಷೆಯ ಸಿನಿಮಾಗಳನ್ನು ದೇಶದ ಇನ್ನಷ್ಟು ಜನರಿಗೆ ತೋರಿಸುವ ಉದ್ದೇಶವನ್ನು ಹೊಂದಿದೆಯಾ ಅಥವಾ ಗಳಿಕೆಯ ದೃಷ್ಟಿಯಿಂದ ಸಿನಿಮಾಗಳನ್ನು ಹಲವು ಭಾಷೆಗಳಲ್ಲಿ ಏಕಕಾಲದಲ್ಲಿ ಬಿಡುಗಡೆ ಮಾಡಲಾಗುತ್ತಿದೆಯಾ? ಈ ರೀತಿಯ ಪ್ರಶ್ನೆಗಳು ಪ್ರೇಕ್ಷಕರಿಗೆ ಕಾಡುತ್ತಿರುವುದು ಸಹಜ, ಅದಕ್ಕೆ ಕಾರಣ ಇಲ್ಲದಿಲ್ಲ.

ಸದ್ಯ, ಭಾರತೀಯ ಚಿತ್ರೋದ್ಯಮದಲ್ಲಿ ಒಟ್ಟಾರೆಯಾಗಿ ಸದ್ದು ಮಾಡುತ್ತಿರುವ ಹೆಸರು ಒಂದೇ, ಅದು ಕಾಂತಾರ ಚಾಪ್ಟರ್ 1. ಹೌದು, ಯಾರ ಬಾಯಲ್ಲಿ ಕೇಳಿದರೂ ಕಾಂತಾರ ಸಿನಿಮಾದ್ದೇ ಮಾತು. ಕರ್ನಾಟಕದ ಅದರಲ್ಲೂ ಕರಾವಳಿ ಭಾಗದ ದೈವಾರಾಧನೆಯನ್ನು ಆಧರಿಸಿ, ತೆಗೆದ ಸಿನಿಮಾವೊಂದು, ದೆಹಲಿಯಲ್ಲೂ ಭಾರೀ ಸದ್ದನ್ನು ಮಾಡುತ್ತಿದೆ ಎಂದರೆ, ಅದಕ್ಕೆ ಇರುವ ಮೂಲ ಕಾರಣ, ಚಿತ್ರಕಥೆ ಮತ್ತು ಅದನ್ನು ತೆರೆಗೆ ತಂದ ನಿರ್ದೇಶಕರ ಜಾಣ್ಮೆ.

ಪ್ಯಾನ್ ಇಂಡಿಯಾ ಸಿನಿಮಾಗಳು ಭಾರತೀಯ ಸಿನಿಮಾ ಮಾರುಕಟ್ಟೆಯಲ್ಲಿ ಹುಟ್ಟು ಹಾಕಿರುವ ಹಲ್ ಚಲ್ ಅಂತಿಂಥದಲ್ಲ. ಇದನ್ನು ಮೊದಲು ಆರಂಭಿಸಿದ್ದು ತೆಲುಗು ಚಿತ್ರೋದ್ಯಮ ಎನ್ನಬಹುದು. ಹಿಂದಿಯ ನಂತರ, ದೇಶದ ಎರಡನೇ ಅತಿದೊಡ್ಡ ಸಿನಿಮಾ ಇಂಡಸ್ಟ್ರಿ ಎಂದರೆ ಅದು ಟಾಲಿವುಡ್. ಚಿತ್ರವನ್ನು ದೇಶಾದ್ಯಂತ ಹೇಗೆ ಜನರಿಗೆ ತಲುಪಿಸಬಹುದು ಎನ್ನುವ ಆಲೋಚನೆ ಬಂದಾಗ, ಆರಂಭವಾಗಿದ್ದದ್ದು ಈ ಪ್ಯಾನ್ ಇಂಡಿಯಾ ಕಾನ್ಸೆಪ್ಟ್. ಇದು ಹುಟ್ಟು ಹಾಕಿದ ಕ್ರೇಜ್ ಒಂದು ಕಡೆಯಾದರೆ, ಬಹುನಿರೀಕ್ಷಿತ ಸಿನಿಮಾಗಳು ಪಲ್ಟಿ ಹೊಡೆದ ಉದಾಹರಣೆಗಳೂ ಇವೆ. ಅಂತಹ ಕೆಲವು, ಉದಾಹರಣೆಗಳನ್ನು ಲೇಖನದಲ್ಲಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

**ಕೆಜಿಎಫ್ ಚಾಪ್ಟರ್ 2 ಮತ್ತು ಕಾಂತಾರ ಚಾಪ್ಟರ್ 1:** ಕಾಂತಾರ ಚಾಪ್ಟರ್ ಒನ್ ಚಿತ್ರ, ಕನ್ನಡಿಗರಿಗೆ ಇಷ್ಟವಾಗುವುದು ದೊಡ್ಡ ವಿಷಯವೇನೂ ಅಲ್ಲ. ಆದರೆ, ಭಾಷಾ ಗಡಿಯನ್ನು ಮೀರಿ, ಇತರ ಭಾಷೆಯಲ್ಲೂ ಗೆಲ್ಲುವುದು ಇದೆಯಲ್ಲಾ, ಅದು ನಿರ್ದೇಶಕನ ಮತ್ತು ಚಿತ್ರತಂಡದ ಗೆಲುವು. ಅಂತದ್ದೊಂದು ಸಾಧನೆಯನ್ನು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಏಕಕಾಲದಲ್ಲಿ ಬಿಡುಗಡೆಗೊಂಡು ಕನ್ನಡದ ಎರಡೂ ಸಿನಿಮಾಗಳು ಸೈ ಅನಿಸಿಕೊಂಡಿದೆ. ಅದು, ಕೆಜಿಎಫ್ ಚಾಪ್ಟರ್ 2 ಮತ್ತು ಕಾಂತಾರ ಚಾಪ್ಟರ್ 1. ಈ ಎರಡು ಸಿನಿಮಾಗಳು ಮೊದಲ ವರ್ಸನ್, ಮೊದಲು ಕನ್ನಡದಲ್ಲಿ ರಿಲೀಸ್ ಆಗಿ ನಂತರ ಬೇರೆ ಭಾಷೆಗಳಿಗೆ ಡಬ್ ಆಗಿದ್ದವು.

**ಮೌತ್ ಪಬ್ಲಿಸಿಟಿ ಎನ್ನುವ ಪ್ರಬಲ ಅಸ್ತ್ರದ ಮುಂದೆ ಯಾವುದೂ ಇಲ್ಲ:** ಕೆಜಿಎಫ್ ಮತ್ತು ಕಾಂತಾರ ಮೊದಲ ಆವೃತ್ತಿಯ ಸಿನಿಮಾಗಳು ಕನ್ನಡದ ಮಾರುಕಟ್ಟೆಯಲ್ಲಿ ದೊಡ್ಡ ಸದ್ದನ್ನು ಮಾಡಲು ಕಾರಣವಾಗಿದ್ದದ್ದು ಮೌತ್ ಪಬ್ಲಿಸಿಟಿ ಎನ್ನುವ ಪ್ರಬಲ ಅಸ್ತ್ರ. ಪ್ರೇಕ್ಷಕರು, ಯಾವ ರಿವಿವ್ ಬಗ್ಗೆಯೂ ಜಾಸ್ತಿ ತಲೆಕೆಡಿಸಿಕೊಳ್ಳಲಿಲ್ಲ. ಫಸ್ಟ್ ಡೇ ಫಸ್ಟ್ ಶೋ ನೋಡಿ ಬರುವ ಪ್ರೇಕ್ಷಕ ಏನು ಹೇಳುತ್ತಾನೋ ಅದರ ಮೇಲೆಯೇ ಸಿನಿಮಾ ಗೆದ್ದದ್ದು. ನಿರ್ಮಾಪಕರ ಮತ್ತು ಹಂಚಿಕೆದಾರರ ಭವಿಷ್ಯ ಅಡಗಿರುವುದೂ ಇಲ್ಲೇ ಕೂಡಾ. ಕೆಜಿಎಫ್ ಪಾರ್ಟ್ ಒನ್, ಮುಂಚೆನೇ ಪ್ಯಾನ್ ಇಂಡಿಯಾ ರಿಲೀಸಿಗೆ ಪ್ಲ್ಯಾನ್ ಮಾಡಲಾಗಿತ್ತು. ಯಾವಾಗ, ಕಾಂತಾರ ಸಿನಿಮಾಗೆ ಸ್ಯಾಂಡಲ್ ವುಡ್ ನಲ್ಲಿ ದೊಡ್ಡ ಹೆಸರು ಸಿಕ್ಕಿತೋ, ಆನಂತರ, ಇತರ ಭಾಷೆಗಳಿಗೆ ಡಬ್ ಮಾಡಲಾಯಿತು. ಅಲ್ಲೂ, ಭಾರೀ ಯಶಸ್ಸನ್ನು ಪಡೆದದ್ದು ಗೊತ್ತಿರುವ ವಿಚಾರ. ಹಾಗಾಗಿ, ಕೆಜಿಎಫ್ ಚಾಪ್ಟರ್ 2 ಮತ್ತು ಕಾಂತಾರ ಚಾಪ್ಟರ್ 1 ಸಿನಿಮಾಗಳು ಪ್ಯಾನ್ ಇಂಡಿಯಾ ರಿಲೀಸ್ ಕಂಡವು.

**ಹೊಂಬಾಳೆ ಫಿಲಂಸ್ ಚಿತ್ರ ನಿರ್ಮಾಣ ಸಂಸ್ಥೆಯ ಹೆಗ್ಗಳಿಕೆ:** ಕನ್ನಡ ಚಿತ್ರೋದ್ಯಮಕ್ಕೆ ಸದ್ಯದ ಮಟ್ಟಿಗೆ ದೊಡ್ಡ ಬೆನ್ನೆಲುಬಾಗಿ ನಿಂತಿರುವವರು, ವಿಜಯ್ ಕಿರಗಂದೂರು ಒಡೆತನದ ಹೊಂಬಾಳೆ ಫಿಲಂಸ್ ಸಂಸ್ಥೆ. ಪ್ಯಾನ್ ಇಂಡಿಯಾ ಕಾನ್ಸೆಪ್ಟ್ ಮೂಲಕ, ಚಿತ್ರವೊಂದರ ಮೂಲಕ ಹೇಗೆ ಐನೂರು, ಸಾವಿರ ಕೋಟಿಯನ್ನು ಎತ್ತಬಹುದು ಎನ್ನುವುದನ್ನು ಕನ್ನಡದ ಮಟ್ಟಿಗೆ ತೋರಿಸಿಕೊಟ್ಟವರು ಹೊಂಬಾಳೆ ಫಿಲಂಸ್. ಕೆಜಿಎಫ್ ಗೆದ್ದ ಜೋಶ್‌ನಲ್ಲೇ, ತೆಲುಗು ನಟರನ್ನು ಪ್ರಮುಖ ತಾರಾಗಣದಲ್ಲಿ ಹಾಕಿಕೊಂಡು ಇತರ ಭಾಷೆಯ ಸಿನಿಮಾವನ್ನು ಮಾಡಿ, ಅಲ್ಲೂ ಸೈ ಎನಿಸಿಕೊಂಡಿರುವುದು ಹೊಂಬಾಳೆ ಸಂಸ್ಥೆಯ ಹೆಗ್ಗಳಿಕೆ.

**ಪ್ಯಾನ್ ಇಂಡಿಯಾ ಸಿನಿಮಾಗೆ ಪ್ರೇಕ್ಷಕರ ಅಪಸ್ವರ:** ಪ್ಯಾನ್ ಇಂಡಿಯಾ ಮಟ್ಟದಲ್ಲಿ ಚಿತ್ರ ಬಿಡುಗಡೆಯಾದಾಗ ಹಲವು ಅಪಸ್ವರಗಳು ಪ್ರೇಕ್ಷಕರಿಂದ ಎದುರಾಗುತ್ತಲೇ ಬರುತ್ತಿದೆ. ತಾಜಾ ಉದಾಹರಣೆ ಕೊಡುವುದಾದರೆ, ಕಾಂತಾರ ಚಾಪ್ಟರ್ ಒನ್ ಸಿನಿಮಾಗೆ ತಮಿಳು, ತೆಲುಗು ಮತ್ತು ಮಲಯಾಳಂ ಜನರಿಂದ ಸಿಗುತ್ತಿರುವ ಪ್ರತಿಕ್ರಿಯೆ ಮಾತ್ರ ಅಭೂತಪೂರ್ವ. ಚಿತ್ರ ನೋಡಿ ಹೊರಬರುವ ಹಲವು ಪ್ರೇಕ್ಷಕರು ಹೇಳುತ್ತಿದ್ದದ್ದು ಏನಂದರೆ, ಪ್ಯಾನ್ ಇಂಡಿಯಾ ಸಿನಿಮಾ ಎಂದರೆ, ಕನ್ನಡ, ತೆಲುಗು, ಮಲಯಾಳಂ, ಹಿಂದಿಯ ಲೀಡ್ ಆಕ್ಟರ್ ಅನ್ನು ಕ್ಯಾಮಿಯೋ ಪಾತ್ರದಲ್ಲಿ ಕರೆಸಿ ಸಿನಿಮಾ ಮಾಡುವುದು ಅಲ್ಲ ಎನ್ನುವುದು. ಆ ಮೂಲಕ, ಅಲ್ಲಿನ ಚಿತ್ರ ರಸಿಕರು, ನೇರವಾಗಿ ರಜನೀಕಾಂತ್ ಅವರ ಇತ್ತೀಚಿನ ಎರಡು ಸಿನಿಮಾಗಳನ್ನು ರೆಫರ್ ಮಾಡಿದಂತಿದೆ. ಪ್ಯಾನ್ ಇಂಡಿಯಾ ಎನ್ನುವುದು ಫ್ಯಾಷನ್ ಆಗಬಾರದು, ಎಲ್ಲಾ ಭಾಷೆಯ ಜನರು ಒಪ್ಪಿಕೊಳ್ಳುವ ರೀತಿಯಲ್ಲಿ ಇರಬೇಕು. ದೈವಾರಾಧನೆ, ಕರ್ನಾಟಕದ ಯಾವುದೇ ಪ್ರಾಂತ್ಯದ ಪೂಜಾ ಪದ್ದತಿ ಇರಬಹುದು, ಆದರೆ ಅದರಲ್ಲಿ ನಮ್ಮ ಧರ್ಮವನ್ನು ನೆನಪಿಸುವ ಅಂಶವಿದೆ ಎನ್ನುವುದು ತಮಿಳು ಪ್ರೇಕ್ಷಕರ ಅಭಿಪ್ರಾಯವಾಗಿತ್ತು.

ಪ್ರಭಾಸ್ ಅಭಿನಯದ ಸಾಹೋ ಜೊತೆಗೆ ರಾಧೆ ಶ್ಯಾಮ್ ಮತ್ತು ಆದಿಪುರುಷ್ ಸಿನಿಮಾಗಳನ್ನು ಕೂಡ ಪ್ಯಾನ್ ಇಂಡಿಯಾ ರಿಲೀಸ್ ಮಾಡಲಾಗಿತ್ತು. ಈ ಎರಡೂ ಸಿನಿಮಾಗಳು ದಯನೀಯವಾಗಿ ಸೋತಿದ್ದವು.

**ಹಿಂದಿ ಸಿನಿಮಾಗಳು ಹಿಂದಿನಿಂದಲೂ ತೆಲುಗು, ತಮಿಳಿನಲ್ಲೂ ಏಕಕಾಲದಲ್ಲಿ ಬಿಡುಗಡೆ:** ಸಾಮಾನ್ಯವಾಗಿ, ಹಿಂದಿ ಭಾಷೆಯ ಸಿನಿಮಾಗಳು ಹಿಂದಿನಿಂದಲೂ ತೆಲುಗು ಮತ್ತು ತಮಿಳಿನಲ್ಲೂ ಏಕಕಾಲದಲ್ಲಿ ಬಿಡುಗಡೆಯಾಗುತ್ತಿತ್ತು. ಕನ್ನಡದಲ್ಲಿ ಡಬ್ಬಿಂಗ್ ನಿಷೇಧದ ಹಿನ್ನಲೆಯಲ್ಲಿ ಕನ್ನಡದಲ್ಲಿ ಬಿಡುಗಡೆಯಾಗುತ್ತಿರಲಿಲ್ಲ ಎನ್ನುವುದು ಒಂದು ಕಡೆ. ಇನ್ನೊಂದು ಕಡೆ, ಚಿತ್ರವನ್ನು ಮೂಲ ಭಾಷೆಯಲ್ಲೇ ನೋಡುವ ಅಭಿಮಾನ ಕನ್ನಡದವರಿಗೂ ಇದ್ದಿದ್ದರಿಂದ, ಪರಭಾಷಾ ನಿರ್ಮಾಪಕರು, ಕನ್ನಡ ರಿಲೀಸಿಗೆ ಪ್ರಯತ್ನವನ್ನು ಮಾಡುತ್ತಿರಲಿಲ್ಲ.

ಆದರೆ, ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಯಲ್ಲೂ ಸಿನಿಮಾ ಲಿಮಿಟೆಡ್ ಸ್ಕ್ರೀನ್‌ನಲ್ಲಿ ಚಿತ್ರ ಬಿಡುಗಡೆಯಾಗುತ್ತಿದೆ. ರಜನೀಕಾಂತ್ ಅಭಿನಯದ ಜೈಲರ್, ಕೂಲಿ ಸಿನಿಮಾಗಳು ಕನ್ನಡ ವರ್ಸನ್‌ನಲ್ಲೂ ಬಿಡುಗಡೆಯಾಗಿತ್ತು. ಅದಕ್ಕೆ ಸಾಧಾರಣ ಯಶಸ್ಸೂ ಸಿಕ್ಕಿತ್ತು ಕೂಡಾ.. ಅದಕ್ಕೊಂದು ಕಾರಣವೆಂದರೆ, ಕ್ರಮವಾಗಿ ಶಿವಣ್ಣ ಮತ್ತು ಉಪೇಂದ್ರ, ಆ ಸಿನಿಮಾಗಳಲ್ಲಿ ಕ್ಯಾಮಿಯೋ ಪಾತ್ರದಲ್ಲಿ ಕಾಣಿಸಿದ್ದು.

**ಪ್ಯಾನ್ ಇಂಡಿಯಾ ಸಿನಿಮಾಗಳು, ಒಂದೇ ಸಮಯದಲ್ಲಿ ಹಲವು ಭಾಷಿಗರನ್ನು ತಲುಪುತ್ತದೆ:** ಕನ್ನಡದಂತೆ ಸೀಮಿತ ಮಾರುಕಟ್ಟೆ ಇರುವ ಮಲಯಾಳಂ ಚಿತ್ರೋದ್ಯಮ ಕಳೆದೆರಡು ವರ್ಷಗಳಲ್ಲಿ ಸಾಕಷ್ಟು ಯಶಸ್ಸನ್ನು ಕಂಡಿದೆ. ಆದರೆ, ಅಲ್ಲಿನ ಸಿನಿಮಾಗಳು ಪ್ಯಾನ್ ಇಂಡಿಯಾ ಕಾನ್ಸೆಪ್ಟ್‌ನಲ್ಲಿ ಬಿಡುಗಡೆಯಾದ ಉದಾಹರಣೆಗಳು ಕಮ್ಮಿ, ಆದರೆ ಅಲ್ಲೂ ಈ ಟ್ರೆಂಡ್ ಆರಂಭವಾಗಿದೆ. ಪ್ಯಾನ್ ಇಂಡಿಯಾ ಸಿನಿಮಾಗಳು, ಒಂದೇ ಸಮಯದಲ್ಲಿ ಹಲವು ಭಾರತೀಯ ಭಾಷೆಗಳಲ್ಲಿ ಬಿಡುಗಡೆಯಾಗುವುದರಿಂದ, ಅವು ಬೇರೆ ಬೇರೆ ಸಂಸ್ಕೃತಿ ವ'ಂತ'ಂ ಭಾಷೆಗಳ ಜನರನ್ನು ತಲುಪಲು ಸಹಾಯವಾಗುತ್ತದೆ ಎನ್ನುವುದು ಚಿತ್ರ ನಿರ್ಮಾಪಕರ ಅಭಿಪ್ರಾಯ.



**ಎಸ್ಎಸ್ ರಾಜಮೌಳಿ ಅವರ ಆಕ್ಷನ್ ಚಿತ್ರಗಳಾದ ಬಾಹುಬಲಿ:** ಖ್ಯಾತ ನಿರ್ದೇಶಕ ಎಸ್ ಎಸ್ ರಾಜಮೌಳಿ ಅವರ ಆಕ್ಷನ್ ಚಿತ್ರಗಳಾದ ಬಾಹುಬಲಿ: ದಿ ಬಿಗಿನಿಂಗ್ (2015) ಮತ್ತು ಬಾಹುಬಲಿ 2: ದಿ ಕನ್ಕ್ಲೂಷನ್ (2017), ಈ ಎರಡು ಚಿತ್ರಗಳು, ಪ್ಯಾನ್ ಇಂಡಿಯಾ ಪರಿಕಲ್ಪನೆಗೆ ದೊಡ್ಡ ವೇಗವನ್ನು ನೀಡಿದವು ಎಂದು ಹೇಳಬಹುದು. ಎರಡೂ ಚಿತ್ರಗಳಿಗೆ ಸಿಕ್ಕಂತಹ ಅಭೂತಪೂರ್ವ ರೆಸ್ಪಾನ್ಸ್, ಚಿತ್ರ ನಿರ್ಮಾಪಕರನ್ನು ಪ್ಯಾನ್ ಇಂಡಿಯಾ ಚಿತ್ರ ತೆಗೆಯಲು ಹೊಸ ಸ್ಫೂರ್ತಿಯನ್ನು ತುಂಬಿದವು. ಸಾವಿರಾರು ಕೋಟಿ ರೂಪಾಯಿ ಬ್ಯುಸಿನೆಸ್ ಮಾಡಿದ ಈ ಸಿನಿಮಾ, ಭಾರತೀಯ ಚಿತ್ರೋದ್ಯಮದ ಮಾರುಕಟ್ಟೆಗೆ ಹೊಸ ತಿರುವನ್ನು ನೀಡಿತು.

**ದ'ಯನೀಯವಾಗಿ ವೈಫಲ್ಯವನ್ನು ಕಂಡ ಪ್ರಭಾಸ್ ಅವರ ಸಾಹೋ:** ಭಾರತೀಯ ಸಿನಿಮಾದ ವ್ಯಾಪ್ತಿ ಮತ್ತು ಮಾರುಕಟ್ಟೆಯನ್ನು ವಿಸ್ತರಿಸಿದ ಪ್ಯಾನ್ ಇಂಡಿಯಾ ಸಿನಿಮಾಗಳು ಬಾಕ್ಸಾಫೀಸ್‌ನಲ್ಲಿ ಮಕಾಡೆ ಮಲಗಿದ ಉದಾಹರಣೆಗಳೂ ಇವೆ. ಬಾಹುಬಲಿ ಸಕ್ಸಸ್‌ನಿಂದ ರಾಷ್ಟ್ರ ಮಟ್ಟದಲ್ಲಿ ಸ್ಟಾರ್ ಆಗಿ ಹೊರಹೊಮ್ಮಿದ್ದ ಪ್ರಭಾಸ್ ಅವರ ಸಾಹೋ ಸಿನಿಮಾ, ದಯನೀಯವಾಗಿ ಗಲ್ಲಾಪೆಟ್ಟಿಗೆಯಲ್ಲಿ ಸೋತಿತ್ತು. ಸುಮಾರು, 325 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಿದ್ದ ಸಿನಿಮಾಗೆ ಹಲವು ಕ್ರಿಟಿಕ್‌ಗಳು, ಐದಕ್ಕೆ ಎರಡೂವರೆ ರೇಟಿಂಗ್ ಅನ್ನು ಕೊಟ್ಟಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಆ ಮೂಲಕ, ಪ್ಯಾನ್ ಇಂಡಿಯಾದ ಎಲ್ಲಾ ಸಿನಿಮಾಗಳು ಗೆಲ್ಲಬೇಕೆಂದೇನೂ ಇಲ್ಲ ಎನ್ನುವುದು ಸಾಬೀತಾಗಿತ್ತು.

**ತಮಿಳಿನಲ್ಲಿ ಸೂಪರ್ ಹಿಟ್ ಸಿನಿಮಾ ನೀಡಿದ ಶಂಕರ್ ನಿರ್ದೇಶನದ 2.0 ಸಿನಿಮಾ:** ಇನ್ನು, ತಮಿಳಿನಲ್ಲಿ ಸೂಪರ್ ಹಿಟ್ ಸಿನಿಮಾ ನೀಡಿದ ಖ್ಯಾತಿಯ ಶಂಕರ್ ನಿರ್ದೇಶನದ 2.0 ಸಿನಿಮಾ 2018ರಲ್ಲಿ ಬಿಡುಗಡೆಯಾಗಿತ್ತು. ರಜನೀಕಾಂತ್, ಅಕ್ಷಯ್ ಕುಮಾರ್, ಆಮಿ ಜಾಕ್ಸನ್ ಪ್ರಮುಖ ಭೂಮಿಕೆಯಲ್ಲಿದ್ದ ಈ ಸಿನಿಮಾ ಕಮರ್ಷಿಯಲ್ ಆಗಿ ಹಿಟ್ ಆಗಿದ್ದರೂ, ವಿಮರ್ಶಕರಿಂದ ತೀರಾ ಟೀಕೆಗೆ ಗುರಿಯಾಗಿತ್ತು. ಸೈನ್ಸ್ ಫಾಂಟಸಿ ಆಕ್ಷನ್ ಥ್ರಿಲ್ಲರ್ ಸಿನಿಮಾ, ರಜನೀಕಾಂತ್ ಅವರ ಹೆಸರಿನಿಂದ, ಮೊದಲ ಕೆಲವು ದಿನ ಸಿನಿಮಾ ಉತ್ತಮ ಗಳಿಕೆಯನ್ನು ಕಂಡಿತ್ತಾದ್ದಾರೂ, ಮೌತ್ ಟಾಕ್ ಗೆಲ್ಲುವಲ್ಲಿ ವಿಫಲವಾಯಿತು. ಪ್ರಮುಖವಾಗಿ, ತಮಿಳು ಮತ್ತು ತೆಲುಗಿನ ಚಿತ್ರ ನಿರ್ಮಾಪಕರು ಪ್ಯಾನ್ ಇಂಡಿಯಾ ಆವೃತ್ತಿಯಲ್ಲಿ ಸಿನಿಮಾ ತೆಗೆಯಬೇಕೇ ಬೇಡವೇ ಎನ್ನುವ ಆಲೋಚನೆಗೆ ದೂಡುವಂತೆ ಮಾಡಿತ್ತು ಈ ಸಿನಿಮಾ.

**ಅಲ್ಲು ಅರ್ಜುನ್ ಅಭಿನಯದ ಪುಷ್ಪಾ ಸಿನಿಮಾ:** ಆದರೆ, ಸಿನಿ ನಿರ್ಮಾಪಕರ ಆಲೋಚನೆಯನ್ನು ಉಲ್ಟಾ ಮಾಡಿದ್ದು ಪುಷ್ಪಾ ಎನ್ನುವ ಮೂಲ ತೆಲುಗಿನ ಸಿನಿಮಾ. ಸುಕುಮಾರನ್ ನಿರ್ದೇಶನದ ಈ ಸಿನಿಮಾದಲ್ಲಿ ಲೀಡ್ ಆಕ್ಟರ್ ಆಗಿದ್ದವರು ಅಲ್ಲು ಅರ್ಜುನ್. ಮೊದಲ ಚಾಪ್ಟರ್ 2021 ರಲ್ಲಿ ಮತ್ತು ಎರಡನೇ ಚಾಪ್ಟರ್ 2024ರಲ್ಲಿ ಬಿಡುಗಡೆಯಾಗಿತ್ತು. ಈ ಸಿನಿಮಾ ಕೂಡಾ, ನೂರಾರು ಕೋಟಿ ರೂಪಾಯಿಯನ್ನು ಬಾಕ್ಸಾಫೀಸ್‌ನಲ್ಲಿ ಗಳಿಸಿತು. ಪ್ಯಾನ್ ಇಂಡಿಯಾ ಬಿಡುಗಡೆಗೆ ಮತ್ತೊಂದು ಪುಷ್ ಕೊಟ್ಟ ಸಿನಿಮಾ ಇದಾಗಿತ್ತು.

**ಎಸ್ಎಸ್ ರಾಜಮೌಳಿ ನಿರ್ದೇಶನದ, ತೆಲುಗು ಮೂಲದ ಸಿನಿಮಾ:** ಪುಷ್ಪಾ ಮೊದಲ ಮತ್ತು ಎರಡನೇ ಆವೃತ್ತಿಯ ನಡುವೆ ಮೂಡಿಬಂದ ಮತ್ತೊಂದು ಸಿನಿಮಾ ಎಂದರೆ ಎಸ್ಎಸ್ ರಾಜಮೌಳಿ ನಿರ್ದೇಶನದ, ತೆಲುಗು ಮೂಲದ ಸಿನಿಮಾ. ತನ್ನ ವಿಶಿಷ್ಟವಾದ ಮೇಕಿಂಗ್‌ನಿಂದ ಹೆಸರಾಗಿರುವ ರಾಜಮೌಳಿ, ಈ ಸಿನಿಮಾವನ್ನು ಪ್ಯಾನ್ ಇಂಡಿಯಾದಲ್ಲಿ ಬಿಡುಗಡೆ ಮಾಡಿದ್ದರು. ಜ್ಯೂ. ಮತ್ತು ರಾಮಚರಣ್ ಅಭಿನಯದ ಸಿನಿಮಾ, ಬಾಕ್ಸಾಫೀಸ್‌ನಲ್ಲಿ ಮತ್ತೊಂದು ಷರಾವನ್ನು ಬರೆಯಿತು. ಈ ಸಿನಿಮಾ, ಏಕಕಾಲದಲ್ಲಿ ಕನ್ನಡದಲ್ಲೂ ರಿಲೀಸ್ ಆಗಿತ್ತು. ಕರ್ನಾಟಕದಲ್ಲಿ ಉತ್ತಮ ರೆಸ್ಪಾನ್ಸ್ ಸಿಕ್ಕಿದ್ದ ಹಿನ್ನಲೆಯಲ್ಲಿ ಶೋಗಳನ್ನು ಜಾಸ್ತಿ ಮಾಡಲಾಗಿತ್ತು.

**ಪ್ರಶಾಂತ್ ನೀಲ್ ನಿರ್ದೇಶನದ, ಸಲಾರ್ ಪಾರ್ಟ್ ಒನ್:** ಪ್ಯಾನ್ ಇಂಡಿಯಾ ಕಾನ್ಸೆಪ್ಟಿನ ಸಿನಿಮಾಗಳ ಯಶಸ್ಸಿನ ಹಿನ್ನಲೆಯಲ್ಲಿ ಹೊಂಬಾಳೆ ಫಿಲಂಸ್ ಅವರ ಪ್ರಭಾಸ್, ಪೃಥ್ವಿರಾಜ್ ಸುಕುಮಾರನ್, ಜಗಪತಿ ಬಾಬು ಅಭಿನಯದ, ಪ್ರಶಾಂತ್ ನೀಲ್ ನಿರ್ದೇಶನದ, ಸಲಾರ್ ಪಾರ್ಟ್ ಒನ್ ಸಿನಿಮಾ ಕೂಡಾ ಬಾಕ್ಸಾಫೀಸ್‌ನಲ್ಲಿ ದೊಡ್ಡ ಸಾಧನೆಯನ್ನು ಮಾಡಿತ್ತು. ಒಟ್ಟಾರೆಯಾಗಿ, ಸುಮಾರು 701 ಕೋಟಿ ರೂಪಾಯಿ ಗಳಿಕೆಯನ್ನು ಕಂಡ ಈ ಸಿನಿಮಾ, ಹದಿನೈದನೇ ಅತಿಹೆಚ್ಚು ಕಲೆಕ್ಷನ್ ಮಾಡಿದ ಇಂಡಿಯನ್ ಸಿನಿಮಾ ಎನ್ನುವ ಹೆಗ್ಗಳಿಕೆಗೂ ಪಾತ್ರವಾಗಿತ್ತು.

**ಪ್ಯಾನ್ ಇಂಡಿಯಾ ಸಿನಿಮಾದ ಕಾನ್ಸೆಪ್ಟ್ ಅನ್ನು ಮತ್ತೊಂದು ಮಜಲಿಗೆ ತೆಗೆದುಕೊಂಡು ಹೋದ ಕಾಂತಾರ:** ಇದೇ ಹುಮ್ಮಸ್ಸಿನಲ್ಲಿ, ಹೊಂಬಾಳೆ ಫಿಲಂಸ್, ಕಾಂತಾರ ಚಾಪ್ಟರ್ ಒನ್ ಸಿನಿಮಾವನ್ನು ಬಿಡುಗಡೆ ಮಾಡಿದೆ. ರಿಷಬ್ ಶೆಟ್ಟಿ ಅಭಿನಯಿಸಿ, ನಿರ್ದೇಶಿಸಿರುವ ಈ ಸಿನಿಮಾ, ಕರ್ನಾಟಕದಲ್ಲಿ ಮನೆಮಾತಾಗಿದೆ. ಪಕ್ಕದ, ಆಂಧ್ರ, ತಮಿಳುನಾಡು, ಕೇರಳ, ತೆಲಂಗಾಣದಲ್ಲಿ ಚಿತ್ರಕ್ಕೆ ಇನ್ನಿಲ್ಲದ ಕಲೆಕ್ಷನ್ ಆಗುತ್ತಿದೆ. ಹಿಂದಿ ಬೆಲ್ಟ್‌ನಲ್ಲೂ ಚಿತ್ರ ಭರ್ಜರಿ ಕಮಾಯಿ ಮಾಡುತ್ತಿದೆ. ಎಲ್ಲೆಲ್ಲೂ, ರಿಷಬ್ ಅವರ ಅಭಿನಯದ್ದೇ ಮಾತು. ಆ ಮೂಲಕ, ಪ್ಯಾನ್ ಇಂಡಿಯಾ ಕಾನ್ಸೆಪ್ಟ್ ಸಿನಿಮಾವನ್ನು ಇನ್ನೊಂದು ಮಜಲಿಗೆ ತೆಗೆದುಕೊಂಡು ಹೋದ ಖ್ಯಾತಿ, ತೆಲುಗು ಜೊತೆ ಕನ್ನಡಕ್ಕೂ ಸಲ್ಲುತ್ತದೆ.




# ಧ್ರುವ ಸರ್ಜಾ ಜೊತೆ ಕೈ ಜೋಡಿಸಿದ

## ರಾಬರ್ಟ್ ನಿರ್ಮಾಪಕ ಉಮಾಪತಿ ಶ್ರೀನಿವಾಸ್ ಗೌಡ

ಕನ್ನಡ ಚಿತ್ರರಂಗದ ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಮೂರು ವರ್ಷಕ್ಕೊಂದು ಚಿತ್ರ ಮಾಡ್ತಾರೆ ಅನ್ನುವ ಪ್ರೀತಿ ತುಂಬಿದ ತಕರಾರೊಂದು ಇವರ ಅಭಿಮಾನಿಗಳಲ್ಲಿದೆ. ಕನಿಷ್ಠ ವರ್ಷಕ್ಕೊಂದಾದರೂ ಚಿತ್ರ ಮಾಡುವಂತೆ ಇವರ ಭಕ್ತಗಣ ಮೇಲಿಂದ ಮೇಲೆ ಮನವಿ ಪತ್ರವನ್ನೂ ಸಲ್ಲಿಸಿದ್ದು ಇದೆ. ಧ್ರುವ ಕೂಡ ತಮ್ಮ ವಿಐಪಿ ಬಣದಿಂದ ಬಂದ ಈ ಮನವಿ ಪತ್ರವನ್ನ ಗಂಭೀರವಾಗಿ ಪರಿಗಣಿಸಿ ಕೆಲಸಕ್ಕೆ ಇಳಿದಿದ್ದಾರೆ ಕೂಡ.

ಆದರೂ ಅದ್ಯಾಕೋ.. ಈ ತ್ರೈವಾರ್ಷಿಕ ಯೋಜನೆ ಮಾತ್ರ ಧ್ರುವ ಸರ್ಜಾ ಅವರನ್ನ ನೆರಳಿನಂತೆ ಹಿಂಬಾಲಿಸುತ್ತಾನೇ ಇದೆ. ಇದಕ್ಕೆ ಪೂರಕವಾಗಿ ಧ್ರುವ ಅಭಿನಯದ ಕೆಡಿ ಮುಹೂರ್ತ ಭಾಗ್ಯ ಕಂಡು ಮೂರುವರೆ ವರ್ಷಗಳಾಗಿವೆ. ಆದರೂ ಬಿಡುಗಡೆಯ ಭಾಗ್ಯ ಮಾತ್ರ ಇನ್ನೂ ಸಿಕ್ಕಿಲ್ಲ. ಹೀಗಿರುವಾಗ ಇದೀಗ ಧ್ರುವಾ ಸರ್ಜಾ ಅವರ ಜೊತೆ ಉಮಾಪತಿ ಶ್ರೀನಿವಾಸ್ ಹೊಸ ಚಿತ್ರವೊಂದನ್ನು ಘೋಷಿಸಿದ್ದಾರೆ.

ಹೌದು. ಮೊನ್ನೆ (ಅಕ್ಟೋಬರ್ 6) ಧ್ರುವಾ ಸರ್ಜಾಗೆ ಅವರಿಗೆ ಹುಟ್ಟುಹಬ್ಬದ ಸಂಭ್ರಮ.. ಸಡಗರ. ಈ ಸಡಗರವನ್ನು ಇವರ ವಿಐಪಿ ಅಭಿಮಾನಿಗಳು ನಿನ್ನೆ ರಾತ್ರಿಯಿಂದನೇ ಹೆಚ್ಚು ಮಾಡಿದ್ದರು. ರಕ್ತದಾನ, ಅನ್ನದಾನ ಅಂತಹ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಇಷ್ಟೇ ಅಲ್ಲ ಸರ್ಕಾರಿ ಶಾಲಾ ಮಕ್ಕಳಿಗೆ ಎರಡೂ ಲಕ್ಷಕ್ಕೂ ಅಧಿಕ ಪುಸ್ತಕವನ್ನು ಕೂಡ ವಿತರಣೆ ಮಾಡಿದರು.

ಈ ಸಂಭ್ರಮಕ್ಕೆ ಚಿತ್ರವನ್ನು ಘೋಷಣೆ ಮಾಡುವ ಮೂಲಕ ಉಮಾಪತಿ ಶ್ರೀನಿವಾಸ್ ಮತ್ತಷ್ಟು ಮೆರಗು ನೀಡಿದ್ದಾರೆ. ಈ ಕುರಿತು ಇಂದು ಬರ್ತ್ ಡೇ ಸಂದರ್ಭದಲ್ಲಿ ಘೋಷಣೆ ಮಾಡಿದ ಉಮಾಪತಿ ಶ್ರೀನಿವಾಸ್ ಚಿತ್ರರಂಗ ಯಾರ ಸ್ವತ್ತು ಅಲ್ಲ, ಯಾವ ವರ್ಗಕ್ಕೂ ಸೇರಿದ್ದು ಅಲ್ಲ. ಧ್ರುವಾ ಸರ್ಜಾ ಅವರಂತೆ ಯಾರು ಯಾರು ಶ್ರಮ ಹಾಕಿ ಕೆಲಸ ಮಾಡ್ತಾರೋ ಅವರ ಮನೆಯಲ್ಲಿ ಖಂಡಿತವಾಗಿಯೂ ಕಲಾ ಸರಸ್ವತಿ ನೆಲೆಯೂರುತ್ತಾಳೆ ಎಂದು ಹೇಳಿದ್ದಾರೆ. ಕೆಡಿ ಸೇರಿ ಧ್ರುವಾ ಅಭಿನಯದ ಇನ್ನು ಕೆಲ ಚಿತ್ರಗಳು ಬರುತ್ತಿವೆ ಆ ಎಲ್ಲಾ ಚಿತ್ರಗಳಿಗೆ ಒಳ್ಳೆಯದಾಗಲಿ ಎಂದು ಶುಭ ಹಾರೈಸಿದ್ದಾರೆ.

ಉಮಾಪತಿ ಶ್ರೀನಿವಾಸ್ ಹೀಗೆ ವೇದಿಕೆ ಮೇಲೆ ತಮ್ಮ ಮತ್ತು ಧ್ರುವಾ ಕಾಂಬಿನೇಷನನ್ ಚಿತ್ರ ಘೋಷಣೆ ಮಾಡುತ್ತಿದ್ದಂತೆಯೇ ನೆರೆದ ಅಭಿಮಾನಿಗಳು ಸಂಭ್ರಮದಿಂದ ಶಿಳ್ಳೆ ಹೊಡೆದಿದ್ದಾರೆ. ಇನ್ನುಳಿದಂತೆ ಅಭಿಮಾನಿಗಳ ಅಭಿಮಾನದ ಕುರಿತು ಮಾತನಾಡಿದ ಧ್ರುವಾ ಸರ್ಜಾ ಅಭಿಮಾನಿಗಳ ಅಭಿಮಾನಕ್ಕೆ ಬೆಲೆ ಕಟ್ಟಲು ಸಾಧ್ಯ ಇಲ್ಲ ಎಂದು ಹೇಳಿದ್ದಾರೆ. ಮಳೆ ಇದ್ದರೂ ಕೂಡ ಬೇರೆ ಬೇರೆ ಊರುಗಳಿಂದ ಬಂದಿದ್ದಾರೆ ಎಂದು ಹೇಳಿರುವ ಧ್ರುವಾ ಎಲ್ಲ ಕಲಾವಿದರ ಪಾಲಿಗೆ ಇದೊಂದು ರೀತಿಯ ಪುಣ್ಯ ಎಂದು ಹೇಳಿದ್ದಾರೆ.

ಇನ್ನೂ ಅರ್ಥಪೂರ್ಣವಾದ ಬರ್ತ್ ಡೇ ಆಚರಿಸಿಕೊಳ್ಳಬೇಕೆನ್ನುವ ಉದ್ದೇಶ ನನ್ನದು. ಇದಕ್ಕೆ ತಕ್ಕಂತೆ ಹಲವು ಸಮಾಜ ಮುಖಿ ಕೆಲಸಗಳನ್ನು ಅಭಿಮಾನಿಗಳು ಮಾಡಿದ್ದಾರೆ ಎಂದು ಹೇಳಿರುವ ಧ್ರುವಾ ಅಭಿಮಾನಿಗಳ ಅಭಿಮಾನಕ್ಕೆ ತಲೆ ಬಾಗಿದ್ದಾರೆ.

ಇದು ಹೊರತು ಪಡಿಸಿದರೆ ಆಗಲೇ ಹೇಳಿದಂತೆ ಸದ್ಯ ಕೆಡಿ ಚಿತ್ರಕ್ಕೆ ಇವರ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಖುದ್ದು ಧ್ರುವಾ ಕೂಡ ಕೆಡಿ ಚಿತ್ರದ ಬಿಡುಗಡೆಯನ್ನು ಎದುರು ನೋಡುತ್ತಿದ್ದಾರೆ. ಈ ಹಿನ್ನೆಲೆ ಇಂದು ಕೆಡಿ ಚಿತ್ರದ ಬಿಡುಗಡೆಗೆ ಸಂಬಂಧಿಸಿದ ಪ್ರಶ್ನೆಯನ್ನು ಕೇಳಿದಾಗ ಧ್ರುವಾ ಡೈರೆಕ್ಟರ್ ಅವರಿಗೆ ಕೇಳಬೇಕು ಎಂದು ಹೇಳಿದ್ದಾರೆ. ಡೈರೆಕ್ಟರ್ ಆದಷ್ಟು ಬೇಗ ಮಾಹಿತಿ ಕೊಡಲಿ ಎಂದು ಮಾಧ್ಯಮದವರ ಮೂಲಕ ನಾನು ಕೂಡ ಮನವಿ ಮಾಡುತ್ತೇನೆ ಎಂದು ಹೇಳಿದ್ದಾರೆ. ಅಂದ್ಹಾಗೇ ಧ್ರುವಾ ಸರ್ಜಾ ಹುಟ್ಟುಹಬ್ಬದ ಪ್ರಯುಕ್ತ ಕೆಡಿ ಚಿತ್ರದ ಹೊಸ ಪೋಸ್ಟರ್‌ವೊಂದನ್ನು ಇಂದು ಬಿಡುಗಡೆ ಮಾಡಲಾಗಿದೆ.






ಭಾರತದಲ್ಲಿ ಹಲವಾರು ರಾಜ್ಯಗಳಲ್ಲಿ ಹುಡುಗಿಯರು ತಮ್ಮ ಶಿಕ್ಷಣ, ಜೀವನ ಮತ್ತು ಉದ್ಯೋಗಾವಕಾಶಗಳ ಹಕ್ಕುಗಳಿಗಾಗಿ ಇನ್ನೂ ಹೋರಾಡುತ್ತಿದ್ದಾರೆ ಎಂದು ನಿಮಗೆ ತಿಳಿದಿದೆಯೇ? ಕೆಲವು ರಾಜ್ಯಗಳಲ್ಲಿ ಜನರು ಭ್ರೂಣದ ಲಿಂಗವನ್ನು ಕಂಡುಹಿಡಿದು ಅದು ಹೆಣ್ಣು ಮಗುವಾಗಿದ್ದರೆ ಗರ್ಭಪಾತ ಮಾಡಲು ಆಯ್ಕೆ ಮಾಡುತ್ತಾರೆ. ಈ ಸಮಸ್ಯೆಗಳನ್ನು ಪರಿಹರಿಸಲು, ಪ್ರತಿ ವರ್ಷ ಅಕ್ಟೋಬರ್ 11 ರಂದು, ಪ್ರಪಂಚವು ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನು ಆಚರಿಸಲು ಒಟ್ಟಾಗಿ ಬರುತ್ತದೆ. ಈ ದಿನವು ಜಾಗತಿಕವಾಗಿ ಹುಡುಗಿಯರು ಎದುರಿಸುತ್ತಿರುವ ನಿರ್ದಿಷ್ಟ ಸವಾಲುಗಳನ್ನು ಎತ್ತಿ ತೋರಿಸಲು ಮತ್ತು ಅವರ ಹಕ್ಕುಗಳಿಗಾಗಿ ಪ್ರತಿಪಾದಿಸಲು ಮೀಸಲಾಗಿರುತ್ತದೆ. ಎಲ್ಲೆಡೆ ಹುಡುಗಿಯರನ್ನು ಗೌರವಿಸಲು ಮತ್ತು ಅವರ ಧ್ವನಿ, ಕಾರ್ಯಗಳು ಮತ್ತು ನಾಯಕತ್ವವನ್ನು ವರ್ಧಿಸಲು ಇದು ಒಂದು ಪ್ರಮುಖ ಜಾಗತಿಕ ಕ್ಷಣವಾಗಿದೆ. ಹುಡುಗಿಯರು ಮತ್ತು ಅವರ ಹಕ್ಕುಗಳ ಬಗ್ಗೆ ಕಾಳಜಿ ವಹಿಸುವ ಪ್ರತಿಯೊಬ್ಬರಿಗೂ ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನವಾಗಿದೆ. ಮಹಿಳಾ ಹಕ್ಕುಗಳ ಸಂಪೂರ್ಣ ವರ್ಣಪಟಲಕ್ಕಾಗಿ ನಾವು ಒಗ್ಗೂಡಿ ಪ್ರತಿಪಾದಿಸಬೇಕಾದ ದಿನ ಇದು.

ಹೆಣ್ಣು ಮಕ್ಕಳ ಸಂಖ್ಯೆಯು ಇಂದಿನ ದಿನಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿಮೆ ಆಗುತ್ತಿದೆ, ಇದಕ್ಕೆ ಕಾರಣಗಳು ಹಲವಾರು ಇರಬಹುದು. ಆದರೆ ಮುಂದೊಂದು ದಿನ ಇದು ದೊಡ್ಡ ಮಟ್ಟದಲ್ಲಿ ಲಿಂಗಾನುಪಾತದಲ್ಲಿ ಗಂಭೀರ ಸಮಸ್ಯೆ ಉಂಟು ಮಾಡಬಹುದು. ಭಾರತದಲ್ಲೂ ಈ ಸಮಸ್ಯೆಯು ಕಾಡುತ್ತಲಿದೆ. ಇಷ್ಟು ಮಾತ್ರವಲ್ಲದೆ ಹೆಣ್ಣು ಮಕ್ಕಳು ಹಲವಾರು ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದರಲ್ಲಿ ಪ್ರಮುಖವಾಗಿ ಹೆಣ್ಣುಭ್ರೂಣ ಹತ್ಯೆ, ಲಿಂಗಭೇದ, ಲೈಂಗಿಕ ಕಿರುಕುಳ ಇತ್ಯಾದಿಗಳು. ಇಂತಹ ಸಮಸ್ಯೆ ನಿವಾರಣೆ ಮಾಡಲು ಹೆಣ್ಣು ಮಕ್ಕಳ ಬಗ್ಗೆ ಜಾಗೃತಿ ಮೂಡಿಸುವುದು ಅತೀ ಅಗತ್ಯವಾಗಿದೆ. ಹೆಣ್ಣು ಮಕ್ಕಳ ಅಂತಾರಾಷ್ಟ್ರೀಯ

# ಅ.11 ಅಂತಾರಾಷ್ಟ್ರೀಯ ಹೆಣ್ಣು ಮಕ್ಕಳ ದಿನ

ದಿನ, ಇದನ್ನು ರಾಷ್ಟ್ರೀಯ ಹೆಣ್ಣು ಮಕ್ಕಳ ದಿನವನ್ನಾಗಿಯೂ ಆಚರಿಸಲಾಗುತ್ತದೆ. 2012ರ ಅಕ್ಟೋಬರ್ 11ರಂದು ವಿಶ್ವಸಂಸ್ಥೆಯು ಈ ದಿನವನ್ನು ಆಚರಣೆಗೆ ತಂದಿದೆ.

ವಿಶ್ವದಾದ್ಯಂತ ಹೆಣ್ಣು ಮಕ್ಕಳು ಎದುರಿಸುವಂತಹ ಗೃಹ ಹಿಂಸೆ, ಭೇದಭಾವ ಮತ್ತು ಬಾಲ್ಯವಿವಾಹದಂತಹ ಹಲವಾರು ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು ಇದರ ಉದ್ದೇಶವಾಗಿದೆ. ಅಸಮಾನತೆ ಎನ್ನುವುದು ಹೆಣ್ಣು ಮಕ್ಕಳ ಮೇಲಿನ ಹಿಂಸೆ ಮತ್ತು ಅವರ ಶಿಕ್ಷಣದ ಹಕ್ಕನ್ನು ಒಳಗೊಂಡಿದೆ. ವಿಶ್ವದಾದ್ಯಂತ ಸುಮಾರು 62 ಸಾವಿರ ಹೆಣ್ಣು ಮಕ್ಕಳಿಗೆ ಶಿಕ್ಷಣವು ಲಭ್ಯವಾಗುತ್ತಿಲ್ಲ. ಹೆಣ್ಣು ಮಕ್ಕಳು ಲೈಂಗಿಕ ಹಿಂಸೆಗೂ ಒಳಗಾಗುತ್ತಿದ್ದಾರೆ. ಹೆಣ್ಣು ಮಕ್ಕಳ ಅಂತಾರಾಷ್ಟ್ರೀಯ ದಿನವು ಈ ಎಲ್ಲಾ ಸಮಸ್ಯೆಗಳನ್ನು ಎತ್ತಿ ಹಿಡಿಯುವುದು ಹಾಗೂ ಹೆಣ್ಣು ಮಕ್ಕಳ ಹಕ್ಕು ಮತ್ತು ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡುವುದು.

ಈ ದಿನದಂದು ಹೆಣ್ಣು ಮಕ್ಕಳ ಉಳಿಸಲು, ಬಾಲ್ಯದಲ್ಲಿ ನಡೆಯುವ ಲೈಂಗಿಕ ಕಿರುಕುಳ ತಗ್ಗಿಸಲು ಮತ್ತು ಹೆಣ್ಣು ಮಕ್ಕಳಿಗೆ ಆರೋಗ್ಯಕರ ಮತ್ತು ಸುರಕ್ಷಿತ ವಾತಾವರಣ ನಿರ್ಮಾಣ ಮಾಡಲು ಈ ದಿನದಂದು ಹಲವಾರು

ಆಚರಣೆಗೆ ಕಾರಣಗಳು: ಸಮಾಜದ ಜನರ ಮಧ್ಯೆ ಹೆಣ್ಣು ಮಕ್ಕಳ ಜೀವನ ಮಟ್ಟವನ್ನು ಉತ್ತಮಪಡಿಸಲು ಇದನ್ನು ಆಚರಣೆ ಮಾಡಲಾ ಗುತ್ತಿದೆ. ಸಮಾಜದಲ್ಲಿ ಹೆಣ್ಣು ಮಕ್ಕಳ ಹಕ್ಕುಗಳ ಅಗತ್ಯತೆ ಬಗ್ಗೆ ಜಾಗೃತಿ ಮೂಡಿಸುವುದು. ಹಲ ವಾರು ರಾಜಕೀಯ ನಾಯಕರು ಮತ್ತು ಸಮುದಾ ಯದ ನಾಯಕರು ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಸಂವಿಧಾನಿಕ ಹಕ್ಕುಗಳ ಬಗ್ಗೆ ಜನರಿಗೆ ತಮ್ಮ ಭಾಷಣ ದಿಂದ ತಿಳಿಸಿಕೊಡು ವರು.



## ರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಮಹತ್ವಗಳು

- 1. ಭಾರತದಲ್ಲಿ ಹೆಣ್ಣು ಮಕ್ಕಳು ಎದುರಿಸುತ್ತಿರುವ ಅಸಮಾನತೆ ಹೋಗಲಾಡಿಸುವುದು ಮತ್ತು ಅದನ್ನು ನಿವಾರಣೆ ಮಾಡುವುದು.
- 2. ಪ್ರತಿಯೊಬ್ಬ ಹೆಣ್ಣು ಮಗಳು ಕೂಡ ಸೂಕ್ತ ಗೌರವ ಪಡೆಯುವುದು.
- 3. ಹೆಣ್ಣು ಮಕ್ಕಳ ಸಂಖ್ಯೆಯು ಕಡಿಮೆ ಆಗುತ್ತಿರುವ ವಿರುದ್ಧ ಜಾಗೃತಿ ಮೂಡಿಸುವುದು ಮತ್ತು ಹೆಣ್ಣು ಮಕ್ಕಳ ಬಗ್ಗೆ ಇರುವ ಮನಸ್ಥಿತಿ ಬದಲಾಯಿಸುವುದು.
- 4. ಹೆಣ್ಣು ಮಕ್ಕಳ ಪಾತ್ರದ ಬಗ್ಗೆ ಜಾಗೃತಿ ಮೂಡಿಸುವುದು.
- 5. ಹೆಣ್ಣು ಮಕ್ಕಳು ಎದುರಿಸುತ್ತಿರುವ ಅಸಮಾನತೆ ಮತ್ತು ಸಂಕಷ್ಟವನ್ನು ದೂರ ಮಾಡುವುದು.
- 6. ಭಾರತದಲ್ಲಿ ಲಿಂಗ ತಾರತಮ್ಯವನ್ನು ದೂರ ಮಾಡುವ ಬಗ್ಗೆ ಅಭಿಯಾನ ಕೈಗೊಳ್ಳುವುದು. ಲಿಂಗದ ಬಗ್ಗೆ ಇರುತ ತಪ್ಪುಕಲ್ಪನೆ ಮತ್ತು ಮೂಢನಂಬಿಕೆ ದೂರ ಮಾಡುವುದು.

## ಪ್ರತಿ ವರ್ಷದ ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನದ ಧ್ಯೇಯವಾಕ್ಯ.

| ವರ್ಷ | ಥೀಮ್ |
|---|---|
| 2012 | ಬಾಲ್ಯ ವಿವಾಹವನ್ನು ಕೊನೆಗೊಳಿಸುವುದು |
| 2013 | ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ನಾವೀನ್ಯತೆ |
| 2014 | ಹದಿಹರೆಯದ ಹುಡುಗಿಯರ ಸಬಲೀಕರಣ: ಹಿಂಸಾಚಾರದ ಚಕ್ರವನ್ನು ಕೊನೆಗೊಳಿಸುವುದು |
| 2015 | ಹದಿಹರೆಯದ ಹುಡುಗಿಯ ಶಕ್ತಿ: 2030 ರ ದೂರದೃಷ್ಟಿ |
| 2016 | ಹುಡುಗಿಯರ ಪ್ರಗತಿ = ಗುರಿಗಳ ಪ್ರಗತಿ: ಹುಡುಗಿಯರಿಗೆ ಏನು ಮುಖ್ಯ |
| 2017 | ಎಂಪವರ್ ಗರ್ಲ್ಸ್: ಬಿಕ್ಕಟ್ಟಿನ ಮೊದಲು, ಸಮಯದಲ್ಲಿ ಮತ್ತು ನಂತರ |
| 2018 | ಅವಳೊಂದಿಗೆ: ಕೌಶಲ್ಯಪೂರ್ಣ ಹುಡುಗಿಯರ ಪಡೆ |
| 2019 | ಗರ್ಲ್‌ಫೋರ್ಸ್: ಅನ್‌ಸ್ಕ್ರಿಪ್ಟ್ ಮತ್ತು ಅನ್‌ಸ್ಟಾಪಬಲ್ |
| 2020 | ನನ್ನ ಧ್ವನಿ, ನಮ್ಮ ಸಮಾನ ಭವಿಷ್ಯ |
| 2021 | ಡಿಜಿಟಲ್ ಪೀಳಿಗೆ. ನಮ್ಮ ಪೀಳಿಗೆ |
| 2022 | ನಮ್ಮ ಸಮಯ ಈಗ – ನಮ್ಮ ಹಕ್ಕುಗಳು, ನಮ್ಮ ಭವಿಷ್ಯ |
| 2023 | ಹೆಣ್ಣುಮಕ್ಕಳ ಹಕ್ಕುಗಳಲ್ಲಿ ಹೂಡಿಕೆ ಮಾಡಿ: ನಮ್ಮ ನಾಯಕತ್ವ, ನಮ್ಮ ಯೋಗಕ್ಷೇಮ |
| 2024 | ಭವಿಷ್ಯಕ್ಕಾಗಿ ಹೆಣ್ಣುಮಕ್ಕಳ ದೃಷ್ಟಿಕೋನ |
| 2025 | ಉಜ್ವಲ ಭವಿಷ್ಯಕ್ಕಾಗಿ ಹೆಣ್ಣುಮಕ್ಕಳ ಸಬಲೀಕರಣ |

